ಸಂಪುಟ 01 । ಸಂಚಿಕೆ 135 । ಮಂಗಳವಾರ 21 ಜುಲೈ 2026 । ಪುಟ 4 । ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707586, 9008787586 naijyadese@gmail.com

## ಈ ದಿನದ ವಿಶೇಷ

1) ರಾಷ್ಟ್ರೀಯ ಜಂಕ್ ಫುಡ್ ದಿನ (National Junk Food Day) ಜನರು ತಮ್ಮ ಇಷ್ಟದ ಜಂಕ್ ಫುಡ್‌ಗಳನ್ನು ಸವಿಯುವ ದಿನ.

2)ರಾಷ್ಟ್ರೀಯ ಬಿ ಸಮ್‌ವನ್ ದಿನ(National Be Someone Day) ರಾಷ್ಟ್ರೀಯ "ಬಿ ಸಮ್‌ವನ್" ಈ ದಿನವನ್ನು ಪ್ರತಿ ವರ್ಷ ಜುಲೈ 21ರಂದು ಆಚರಿಸಲಾಗುತ್ತದೆ.ಈ ದಿನದ ಮುಖ್ಯ ಉದ್ದೇಶವೆಂದರೆ, ಪ್ರತಿಯೊಬ್ಬ ವಯಸ್ಕರು ತಮ್ಮ ದಿನದ ಸ್ವಲ್ಪ ಸಮಯವನ್ನು ಮೀಸಲಿಟ್ಟು, ಒಬ್ಬ ಮಗುವಿನ ಜೀವನದಲ್ಲಿ ಸಕಾರಾತ್ಮಕ ಮತ್ತು ಶಾಶ್ವತ ಬದಲಾವಣೆಯನ್ನು ತರಲು ಪ್ರಯತ್ನಿಸಬೇಕು ಎಂಬ ಸಂದೇಶವನ್ನು ಸಾರುವುದು.

3)ಗ್ಲೋಬಲ್ ಹಗ್ ಯೋರ್ ಕಿಡ್ಸ್ ಡೇ (Global Hug Your Kids Day) ಮಕ್ಕಳಿಗೆ ಪ್ರೀತಿ, ಕಾಳಜಿ ಮತ್ತು ಬೆಂಬಲವನ್ನು ವ್ಯಕ್ತಪಡಿಸುವ ದಿನ.

4)ಲಾಮಿಂಗ್ಟನ್ ದಿನ (National Lamington Day) ಆಸ್ಟ್ರೇಲಿಯಾದ ಪ್ರಸಿದ್ಧ ಸಿಹಿತಿಂಡಿ Lamington ಅನ್ನು ಆಚ-ರಿಸುವ ದಿನ.

## ಸುಭಾಷಿತ

ಒಂದು ಕಾಲು ಮುಂದೆ, ಒಂದು
ಕಾಲು ಹಿಂದೆ ,ಮುಂದಿನ ಕಾಲಿಗೆ
ಗರ್ವವಿಲ್ಲಾ,ಹಿಂದಿನ ಕಾಲಿಗೆ ಬೇಸರವಿಲ್ಲ
ಯಾಕಂದರೆ... ಅವುಗಳಿಗೆ ಗೊತ್ತು,ಇದು
ಕ್ಷಣಾರ್ಧದ್ದಲ್ಲಿ ಬದಲಾವಣೆಯಾಗುತ್ತದೆ
ಅಂತ, ಜೀವನವು ಸಹ
ಹೀಗೆ,ಯಾವಗಲೂ ಸ್ಥಿರವಾಗಿರುವುದಿಲ್ಲ,

–ಸಿದ್ದೇಶ್ವರ ಸ್ವಾಮೀಜಿ

# ಮನೆ ಮನೆಗೆ ತೆರಳಿ ಶಾಶ್ವತ ನಿವಾಸ ಪ್ರಮಾಣಪತ್ರ ಮತ್ತು ಜಾತಿ ಪ್ರಮಾಣಪತ್ರ ವಿತರಿಸುವ ಅಭಿಯಾನಕ್ಕೆ ಸಿಎಂ ಚಾಲನೆ

❑ ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ರಾಜ್ಯದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿ ತೀವ್ರ ಪರಿಷ್ಕರಣೆಗೆ ಪೂರಕವಾಗಿ ಶಾಶ್ವತ ನಿವಾಸ ಪ್ರಮಾಣಪತ್ರ ಮತ್ತು ಜಾತಿ ಪ್ರಮಾಣಪತ್ರಗಳನ್ನು ಮನೆ ಮನೆಗೆ ತೆರಳಿ ವಿತರಿಸುವ ಅಭಿಯಾನಕ್ಕೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದು ಚಾಲನೆ ನೀಡಿದರು. ವಿಧಾನಸೌಧದ ಸಮೇಳನ ಸಭಾಂಗಣದಲ್ಲಿಂದು ಆನ್‌ಲೈನ್ ಸೇವೆಯನ್ನು ಲೋಕಾರ್ಪಣೆ ಮಾಡಿದ ಬಳಿಕ ಮಾತನಾಡಿದ ಅವರು, ಚುನಾವಣಾ ಆಯೋಗ ಸಮತಿಸಿರುವ ಖಾಯಂ ನಿವಾಸಿ ಪ್ರಮಾಣಪತ್ರ ಮತ್ತು ಜಾತಿ ಪ್ರಮಾಣಪತ್ರಗಳನ್ನು ಉಚಿತವಾಗಿ ಮನೆ ಮನೆಗೆ ತೆರಳಿ ನೀಡಲಾಗುತ್ತಿದೆ ಎಂದು ಹೇಳಿದರು.

ದೇಶದಲ್ಲಿ ಯಾವ ರಾಜ್ಯದಲ್ಲೂ ಮನೆ ಮನೆಗೆ ತೆರಳಿ ಪ್ರಮಾಣಪತ್ರಗಳನ್ನು ನೀಡುತ್ತಿಲ್ಲ. ಆದರೆ ನಮ ಸರ್ಕಾರ ಪ್ರತಿಯೊಬ್ಬರು ಬದುಕನ್ನು ಸುಧಾರಿಸುವ ಕೆಲಸ ಮಾಡುತ್ತಿದೆ ಎಂದರು. ದೇವರಾಜು ಅರಸು ಕಾಲದಲ್ಲಿ ಭೂಮಿ ಹಕ್ಕು ನೀಡಲಾಗಿತ್ತು. ಎಸ್.ಎಂ.ಕೃಷ್ಣ ಅವಧಿಯಲ್ಲಿ ಭೂಮಿ ಯೋಜನೆಯಡಿ ಪಹಣಿ ನೀಡಲಾಗಿದೆ. ತಾವು ಮೊದಲಿನಿಂದಲೂ ನಿಮ ಮತ ನಿಮ ಹಕ್ಕು ಎಂದು ಹೇಳುತ್ತಾ ಬಂದಿದ್ದೇನೆ ಎಂದರು.

ಖಾಯಂ ವಾಸ ಪ್ರಮಾಣಪತ್ರ ಅಥ-'ವಾ ಜಾತಿ ಪ್ರಮಾಣಪತ್ರಗಳನ್ನು ನೀಡಲು ಏಕಾಏಕಿ ನಿರ್ಧಾರ ಮಾಡಿಲ್ಲ, ಲಭ್ಯವಿರುವ ನಿಯಮಗಳನ್ನು ಪರಿಶೀಲಿಸಲಾಗಿದೆ. ಚುನಾವಣಾ ಆಯೋಗದ ಅಧಿಕಾರಿಗಳು ಹಾಗೂ ಸಕ್ಷಮ ಪ್ರಾಧಿಕಾರಗಳ ಜೊತೆ ಚರ್ಚಿಸಿ ಅವರು ನೀಡಿದ ನಿರ್ದೇಶನದ ಅನುಸಾರವೇ ಕ್ರಮಕೈಗೊಳ್ಳಲಾಗುತ್ತಿದೆ ಎಂದು




ತಿಳಿಸಿದರು.ವಿರೋಧ ಪಕ್ಷಗಳ ಸ್ನೇಹಿತರು ಅನಗತ್ಯವಾದ ಅಪಪ್ರಚಾರ ಮಾಡುತ್ತಿದ್ದಾರೆ. ಅದರಲ್ಲಿ ಯಾವುದೇ ಉರುಳಿಲ್ಲ. ನಾವು ಯಾವುದೇ ರೀತಿಯ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡಿಲ್ಲ ಎಂದು ಸ್ಪಷ್ಟಪಡಿಸಿದರು.

ಮತದಾರರ ಪಟ್ಟಿಯಲ್ಲಿ ಹೆಸರು ಇಲ್ಲದೇ ಇದ್ದರೆ ಸರ್ಕಾರದ ಸೌಲಭ್ಯಗಳು ಇಲ್ಲವಾಗುತ್ತವೆ. ಹೀಗಾಗಿ ಪ್ರತಿಯೊಬ್ಬರು ಮತದಾರರ ಪಟ್ಟಿಗೆ ಹೆಸರು ಸೇರಿಸಲು ಮುಂದಾಗಬೇಕು. ಅದಕ್ಕೆ ಬೇಕಾದ ದಾಖಲಾತಿಗಳನ್ನು ಸರ್ಕಾರ ಒದಗಿಸುತ್ತದೆ ಎಂದು ತಿಳಿಸಿದರು.

ಪ್ರಮಾಣ ಪತ್ರಗಳನ್ನು ಭೌತಿ-ಕವಾಗಿಯಾದರೂ ಪಡೆದುಕೊಳ್ಳಬಹುದು ಅಥವಾ ಆನ್‌ಲೈನ್ ಮೂಲಕವೂ ಅರ್ಜಿ ಸಲ್ಲಿಸಿ ಪಡೆದುಕೊಳ್ಳಬಹುದು ಎಂದು ವಿವ-ರಿಸಿದರು.ಕಂದಾಯ ಸಚಿವರೂ ಆಗಿರುವ ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಮಾತನಾಡಿ, ಕೇಂದ್ರ ಚುನಾವಣಾ ಆಯೋಗ ಎಸ್‌ಐಆರ್ ನಡೆಸುತ್ತಿದೆ. ಅದಕ್ಕೆ ಸಹಾಯವಾಗುವಂತೆ ದಾಖಲೆ ನೀಡಲು ನಮ ಸರ್ಕಾರ ಹೊಸ ಹೆಜ್ಜೆ ಇಟ್ಟಿದೆ. ಜನರ ಸೇವೆಗಾಗಿ ಕಾರ್ಯಕ್ರಮ ನೀಡುತ್ತಿದೆ ಎಂದು ಹೇಳಿದರು.

ಶಾಶ್ವತ ನಿವಾಸಿ ಪ್ರಮಾಣ ಪತ್ತ ನೀಡಲು 11 ಮಾನದಂಡಗಳನ್ನು ಬಳಸಿಕೊಳ್ಳುತ್ತಿದ್ದೇವೆ. ಜಾತಿ ಪ್ರಮಾಣ ಪತ್ರವನ್ನೂ ನೀಡುತ್ತಿದ್ದೇವೆ. ಉದ್ಯೋಗ, ವಿವಾಹ ಪರಿಶೀಲಿಸುತ್ತೇವೆ. ರಾಜ್ಯದಲ್ಲಿ 10 ವರ್ಷ ವಾಸ ಮಾಡಿರಬೇಕು. ಕರ್ನಾಟಕದಲ್ಲೇ ಜನಿಸಿದವರಿಗೆ ಪ್ರಮಾಣ ಪತ್ರ ನೀಡಲಾಗುವುದು ಎಂದು ಹೇಳಿದರು.

ಮನೆಮನೆಗೆ ಭೇಟಿ ದಾಖಲೆಗಳನ್ನ ಸಲ್ಲಿಸುತ್ತೇವೆ. ಸಾರ್ವಜನಿಕರು ಕಚೇರಿ ಅಲೆದಾಟಕ್ಕೆ ಬ್ರೇಕ್ ಹಾಕುತ್ತಿದ್ದೇವೆ ಎಂದು ಹೇಳಿದರು.

ರಾಜ್ಯದಲ್ಲಿ 2.3 ಕೋಟಿ ಅನುಸೂಚಿತ ಜಾತಿ ಮತ್ತು ಪಂಗಡಗಳ ಪ್ರಮಾಣಾ ಪತ್ರಗಳಿವೆ. ಸಾಮಾನ್ಯಜಾತಿಗಳು 1.8 ಕೋಟಿ ಪ್ರಮಾಣ ಪತ್ರ ಇವೆ. ಒಟ್ಟು ರಾಜ್ಯದಲ್ಲಿ 4.85 ಕೋಟಿ ಜನರಿಗೆ ಜಾತಿ ಪ್ರಮಾಣ ಪತ್ರ ನೀಡಲಾಗುತ್ತಿದೆ ಎಂದು ಹೇಳಿದರು.

ವಾಸ ಪ್ರಮಾಣ ಪತ್ರ ಮತ್ತು ಜಾತಿ ಪ್ರಮಾಣ ಪತ್ರಗಳನ್ನು ವೆಬ್ ಸೈಟ್ ಮೂಲಕ ಉಚಿತವಾಗಿ ಡೌನ್ ಲೋಡ್ ಮಾಡಿಕೊಳ್ಳಬಹುದು. ನಾಗರೀಕ ಸೌಲಭ್ಯ ಕೇಂದ್ರಗಳಿಂದಲೂ ಸಹಾಯ ಪಡೆಯಬಹುದು. ನೇರವಾಗಿಯೂ ಪ್ರಮಾಣ ಪತ್ರ ಪಡೆಯಬಹುದು, ಗ್ರಾಮ ಒನ್, ಬಾಪೂಜಿ ಸೇವಾ ಕೇಂದ್ರಗಳಿಂದ ಪಡೆಯಬಹುದು ಎಂದು ಹೇಳಿದರು. ದೂರುಗಳಿದ್ದರೆ ಸಕ್ಷಮ ಪ್ರಾಧಿಕಾರದಲ್ಲಿ ಅರ್ಜಿ ಸಲ್ಲಿಸಬಹುದು. ಅವುಗಳನ್ನು ತಹಸೀಲ್ದಾರ್, ಉಪತಹಸೀಲ್ದಾರ್ ಗಮನಿಸುತ್ತಾರೆ. ಜಿಲ್ಲಾಧಿಕಾರಿಗಳ ಹಂತದಲ್ಲಿ ಮೇಲನವಿಗೆ ಅವಕಾಶ ನೀಡಲಾಗಿದೆ ಎಂದು ಹೇಳಿದರು. ವಾಸ ಪ್ರಮಾಣ ಪತ್ರ ಪಡೆಯಲು ಕರ್ನಾಟಕದಲ್ಲಿಯೇ ಜನಿಸಿರಬೇಕು, ಸಾಮಾನ್ಯ ವಾಸಸ್ಥಳ ತಂದೆ, ತಾಯಿ ಇಲ್ಲಿ 10 ವರ್ಷ ಇರಬೇಕು. ಅರ್ಜಿದಾರರು ಶಿಕ್ಷಣ ಸಂಸ್ಥೆಗಳಲ್ಲಿ ಪಿಯುಸಿ ಶಿಕ್ಷಣ ಪಡೆದಿರಬೇಕು. ಪೋಷಕರು, ಸಂಗಾತಿ ವಾಸಸ್ಥಳ ಇಲ್ಲಿರಬೇಕು. ಇಲ್ಲಿ ವಸತಿ, ಸ್ಥಿರಾಸ್ಥಿ ಹೊಂದಿದ್ದರು ಅರ್ಹರಾಗಿರುತ್ತಾರೆ ಎಂದು ವಿವರಿಸಿದರು. ಮತದಾರರ ಪಟ್ಟಿಯಲ್ಲಿ ಅರ್ಹರ ಹೆಸ-ರಿರಬೇಕು. ಅದಕ್ಕಾಗಿ ಕಂದಾಯ ದಾಖಲೆಗಳನ್ನು ಒದಗಿಸಲಾಗುತ್ತಿದೆ. ಇಲ್ಲಿನವರನ್ನ ವಿವಾಹ ಆದರೂ ಖಾಯಂ ವಾಸಿ ಪ್ರಮಾಣ ಪತ್ರಕ್ಕೆ ಅರ್ಹರು, ಅತಂಹವರಿಗೂ ಅರ್ಜಿ ಸಲ್ಲಿಸಲು ಅವಕಾಶವಿದೆ ಎಂದು ಹೇಳಿದರು.

# ಗ್ರಾಮದೇವತೆ ಜಾತ್ರೆ: ನಾಲ್ಕನೇ ದಿನದ ಕಾರ್ಯಕ್ರಮಗಳು

❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟೆ: ಐತಿಹಾಸಿಕ ಪಟ್ಟಣದಲ್ಲಿ ಪ್ರತಿ ಮೂರು ವರ್ಷಕ್ಕೊಮ್ಮೆ ಜರುಗುವ ಗ್ರಾಮದೇವತೆ ಜಾತ್ರಾ ಮಹೋತ್ಸವದ ನಾಲ್ಕನೇ ದಿನವಾದ ಜುಲೈ 20 ಸೋಮವಾರದಂದು ಶ್ರೀ ಗ್ರಾಮ ದೇವತೆ ಪ್ರತಿಷ್ಠಾಪನೆಗೊಂಡಿರುವ ರಾಜವಾಡೆ ಆವರಣದಲ್ಲಿ ವಿವಿಧ ಧಾರ್ಮಿಕ, ಸಂಸ್ಕೃತಿಕ ಹಾಗೂ ಕ್ರೀಡಾ ಸ್ಪರ್ಧೆಗಳು ಜರುಗಿದವು.**

ಬೆಳಿಗ್ಗೆಯಿಂದಲೇ ಶ್ರೀ ಗ್ರಾಮ ದೇವತೆಯ ದರ್ಶನ ಪಡೆಯಲು ಎಲ್ಲಡೆಯಿಂದ ಭಕ್ತರ ಜನಸಾಗರವೇ ಹರಿದುಬಂದಿದ್ದು ದ್ಯಾಮವ್ವ ತಾಯಿಯ ಭಕ್ತರು ಸರದಿ ಸಾಲಿನಲ್ಲಿ ನಿಂತುಕೊಂಡು ದರ್ಶನ ಪಡೆದುಕೊಂಡರು. ಪಟ್ಟಣದಲ್ಲಿ ಕಳೆದ ಮೂರು ದಿನಗಳಿಂದ ನಿರಂತರ ಜಿಟಿ ಮಳೆ ಸುರಿಯುತ್ತಿದ್ದರೂ ಭಕ್ತರು ಉತ್ಸಾಹವನ್ನು ಕಳೆದುಕೊಳ್ಳದೆ ಎಲ್ಲಾ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿರುವುದು ವಿಶೇಷವಾಗಿತ್ತು. ಇಂದು ಬೆಳಿಗ್ಗೆ 9.30 ರಿಂದ ಮಧ್ಯಾಹ್ನ 3: 00 ರವರೆಗೆ ಉತ್ತರ ಕರ್ನಾಟಕ ಭಾಗದ ಸುಪ್ರಸಿದ್ಧ ಜನಪದ ಸಂಸ್ಕೃತಿಯ ಗೀಗೀ ಪದಗಳ ಕಾರ್ಯಕ್ರಮ ನೆರದ ಸಾವಿರಾರು ಭಕ್ತರ ಮನ ಸೂರೆಗೊಂಡಿತು.

ನಂತರ ಬೆಳಿಗ್ಗೆ 10 ಗಂಟೆಗೆ ರಾಜವಾಡೆ ಮೈದಾನದಲ್ಲಿ ರಾಜ್ಯಮಟ್ಟದ



ಕಬಡ್ಡಿ ಪಂದ್ಯಾವಳಿಯ ಅಂತಿಮ ಪಂದ್ಯಗಳು ಹಾಗೂ ಮಧ್ಯಾಹ್ನ 3 ಗಂಟೆಯಿಂದ ಸಂಜೆ ಆರರವರೆಗೆ ಭಾರ ಎತ್ತುವ ಸ್ಪರ್ಧೆಗಳು ನಡೆದವು. ಸ್ಪರ್ಧೆಯ ವಿಜೇತರಿಗೆ ವಿಶೇಷ ನಗದು ಬಹುಮಾನ ಘೋಷಿಸಲಾಗಿತ್ತು. ಭಕ್ತರ ಮೆಚ್ಚುಗೆಗೆ ಪಾತ್ರವಾದ ಪ್ರಸಾದ ಸೇವೆ: ಶ್ರೀ ಗ್ರಾಮದೇವಿ ದರ್ಶನಕ್ಕೆ ಆಗಮಿಸುವ ಸುಮಾರು 15ರಿಂದ 20 ಸಾವಿರ ಭಕ್ತರಿಗೆ ಪ್ರತಿದಿನವೂ ವಿಶೇಷ ಪ್ರಸಾದ ವ್ಯವಸ್ಥೆಯನ್ನು ಮಾಡಲಾಗಿದೆ ಎಂದು ಕೋಳೂರ ಗ್ರಾಮದ ಪ್ರಸಿದ್ಧ ಅಡುಗೆ ಭಟ್ಟರಾದ ಮಲ್ಲಣ್ಣ ಬಯ್ಯಾಪೂರ ಹೇಳಿದರು.

ಸೋಮವಾರ ಪ್ರಸಾದ ವ್ಯವಸ್ಥೆಯನ್ನು ಜಾತ್ರಾ ಸಮಿತಿಯಿಂದ ಮಾಡಲಾಗಿತ್ತು. ಸಂಜೆ 7 ಗಂಟೆಗೆ ಧರ್ಮಸಭೆ ಹಾಗೂ ರಾತ್ರಿ 10 ಗಂಟೆಯಿಂದ ವಿವಿಧ ಮನರಂಜನೆ ಕಾರ್ಯಕ್ರಮಗಳು ಜರುಗಿದವು.ಈ ಸಮಯದಲ್ಲಿ ಪ್ರಸಾದ ಸೇವಾ ವ್ಯವಸ್ಥಾಪಕರಾದ ಸಿದ್ದನಗೌಡ ಪಾಟೀಲ, ಬಸವರಾಜ ಚೌದ್ರಿ, ಬಸವರಾಜ ಕಶೆಟ್ಟಿ, ಶರಣಗೌಡ ಗೊಟಗುಣಕಿ, ಬಸಯ್ಯ ಹಿರೇಮಠ, ನಾಗಪ್ಪ ಗೊಟಗುಣಕಿ, ಸುರೇಶ್ ಪವಾರ, ಪರಮಣ್ಣ ಪಾಟೀಲ, ಶರಣು ಹಡಗಿನಾಳ, ಸಿದ್ದರಾಮೇಶ ಬಯ್ಯಾಪುರ, ವೀರೇಶ ಕಾಚಗಾರ, ಮಡಿವಾಳಪ್ಪ ಹಳ್ಳೂರ, ಅಬ್ದುಲಸಾಬ, ಸಿದ್ದರಾಮಪ್ಪ ಬಿದರಕುಂದಿ ಮತ್ತಿತರರು ಇದ್ದರು.

# ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಧರಣಿ ಸತ್ಯಾಗ್ರಹ ಆರಂಭ

❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಕಲಿಕೇರಿಯಿಂದ ಬಿಂಜಲಬಾವಿ ಗ್ರಾಮದ ಮಾರ್ಗವಾಗಿ ಕೆಸರಟ್ಟಿಯವರೆಗೆ ರಸ್ತೆ ಡಾಂಬರೀಕರಣ ಹಾಗೂ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ ರಾಷ್ಟ್ರೀಯ ರೈತ ಸಂಘ ತಾಲೂಕ ಘಟಕದ ಪದಾಧಿಕಾರಿಗಳು ಬಿಂಜಲಭಾವಿ ಗ್ರಾಮದ ಹತ್ತಿರ ಧರಣಿ ಸತ್ಯಾಗ್ರಹ ಆರಂಭಿಸಿ ತಾಳಿಕೋಟಿ ಸಿರಸ್ತೆದಾರ ಅನೀಲಕುಮಾರ ಚೌವ್ಹಾಣ ಇವರ ಮೂಲಕ ಶಾಸಕರು,**

ಜಿಲ್ಲಾಧಿಕಾರಿ ಹಾಗೂ ಲೋಕೋಪಯೋಗಿ ಇಲಾಖೆಯ ಅಭಿಯಂತರರಿಗೆ ಸೋಮವಾರ ಮನವಿ ಸಲ್ಲಿಸಿದರು. ಮನವಿ ಪತ್ರದಲ್ಲಿ ಕಲಿಕೇ-ರಿಯಿಂದ ಬಿಂಜಲಬಾವಿ ಮಾರ್ಗವಾಗಿ ಕೆಸರಟ್ಟಿ ಅವರಿಗೆ ಸುಮಾರು 10 ಕಿ.ಮೀ ರಸ್ತೆ ಸಂಪೂರ್ಣ ಹಾಳಾಗಿದ್ದು ರಸ್ತೆ ಅಪಘಾತಗಳಿಗೆ ಕಾರಣವಾಗುತ್ತಿದೆ ಇದನ್ನು ಆದಷ್ಟು ಬೇಗ ಡಾಂಬರೀಕರಣ ಗೊಳಿಸಬೇಕು ಅದು ಸಾಧ್ಯವಿಲ್ಲದಿದ್ದರೆ ಕನಿಷ್ಠಪಕ್ಷ ತಗ್ಗು ಗುಂಡಿಗಳನ್ನು ಮುಚ್ಚಬೇಕು.

ಬಿಂಜಲಬಾವಿ ಹಾಗೂ ಸುತ್ತ ಮುತ್ತಲಿನ ಗ್ರಾಮಗಳಲ್ಲಿ ವೃದ್ಧಾಪ್ಯ,



ವಿಧವಾ ಹಾಗೂ ಅಂಗವಿಕಲರ ವೇತನ ಸರಿಯಾಗಿ ಸಿಗುತ್ತಿಲ್ಲ ಅದನ್ನು 15 ದಿನಗಳ ಒಳಗಾಗಿ ಸಿಗುವಂತೆ ಮಾಡಬೇಕು. 2026-27 ನೇ ಸಾಲಿನ ಬೆಳೆ ಪರಿಹಾರ ಸರಳವಾಗಿ ಸಿಗುವಂತಾಗಲು ರೈತರ ಜಮೀನುಗಳಲ್ಲಿ ಇಲಾಖೆಯಿಂದಲೇ ಜಿಪಿ-ಎಸ್ ಮಾಡಿಸಬೇಕು. ಮುಂಗಾರು ಮಳೆ ಸುರಿಯದೇ ಇರುವುದರಿಂದ ರೈತರು ಕಂಗೆಟ್ಟಿದ್ದು ತಾಳಿಕೋಟಿ ತಾಲೂಕನ್ನು ಬರಪೀಡಿತ ತಾಲೂಕು ಎಂದು ಘೋಷಿಸಬೇಕು ಎಂದು ತಿಳಿಸಲಾಗಿದೆ.

ಈ ಸಂದರ್ಭದಲ್ಲಿ ರಾಷ್ಟ್ರೀಯ ರ?ತ ಸಂಘದ ರಾಜ್ಯ ಮಹಿಳಾ ಕಾರ್ಯದರ್ಶಿಗಳಾದ ರೇಣುಕಾ ಪಾಟೀಲ, ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷ ಹಣಮಂತ ಈ.ವಡ್ಡರ, ಜಿಲ್ಲಾ ಉಪಾಧ್ಯಕ್ಷ ಮ?ಬೂಬಬಾಷಾ ಮನಗೂಳಿ, ತಾಳಿಕೋಟಿ ತಾಲೂಕಾ ಉಪಾಧ್ಯಕ್ಷ ಶರಣು ಕವದಿ, ಮತ್ತು ತಾಳಿಕೋಟಿ ಯುವಮೋರ್ಚಾ ಅಧ್ಯಕ್ಷ ಗೌಡಪ್ಪಗೌಡ ಹಳಿಮನಿ, ಗ್ರಾಮ ಘಟಕಾಧ್ಯಕ್ಷ ವಿಜಯಕುಮಾರ್ಯ ಉಕ್ಕಲಿ, ಜಿಲ್ಲಾ ಉಪಾಧ್ಯಕ್ಷ ಸಂಪತ್ ಜಮಾದಾರ, ದೇವರ ಹಿಪ್ಪರಗಿ ತಾಲೂಕ ಅಧ್ಯಕ್ಷ ಶಿವಪ್ಪ ಡೋಣೂರ, ಸಂಗು ಹುಣಸಗಿ ಉಪಸ್ಥಿತರಿದ್ದರು.

# ಜಾಲಹಳ್ಳಿ ಡಿವೈಎಫ್‌ಐ ಹೋರಾಟಕ್ಕೆ ಮಣಿದ ಅಧಿಕಾರಿಗಳು: ಕಳಪೆ ರಸ್ತೆ ತೆರವು, ಮರುನಿರ್ಮಾಣಕ್ಕೆ ಚಾಲನೆ

❑ ನೈಜ್ಯ ದೆಸೆ ನ್ಯೂಸ್

**ಜಾಲಹಳ್ಳಿ: ಗ್ರಾಮದ ವಿವಿಧ ಜನಪರ ಸಮಸ್ಯೆಗಳ ಪರಿಹಾರಕ್ಕೆ ಆಗ್ರಹಿಸಿ ಡಿವೈಎಫ್‌ಐ ಜಾಲಹಳ್ಳಿ ಗ್ರಾಮ ಘಟಕದ ನೇತೃತ್ವದಲ್ಲಿ ಅಂಬೇಡ್ಕರ್ ವೃತ್ತದಲ್ಲಿ ನಡೆದ ಬೃಹತ್ ರಸ್ತೆ ತಡೆ ಹೋರಾಟಕ್ಕೆ ಅಧಿಕಾರಿಗಳು ಸ್ಪಂದಿಸಿದ್ದು, ಕಳಪೆ ಗುಣಮಟ್ಟದಲ್ಲಿ ನಿರ್ಮಿಸಲಾಗಿದ್ದ ಸಿಸಿ ರಸ್ತೆಯನ್ನು ಸ್ಥಳದಲ್ಲೇ ತೆರವುಗೊಳಿಸಿ ಮರುನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿದರು.**

ಅಂಬೇಡ್ಕರ್ ವೃತ್ತದಿಂದ ಲಕ್ಷ್ಮೀ ರಂಗನಾಥ ದೇವಸ್ಥಾನದವರೆಗೆ ನಿರ್ಮಿಸಲಾಗಿದ್ದ ಕಳಪೆ ಸಿಸಿ ರಸ್ತೆಯನ್ನು ತೆರವುಗೊಳಿಸಿ ಮರುನಿರ್ಮಾಣ ಮಾಡುವುದು, ಗ್ರಾಮಕ್ಕೆ 110 ಕೆವಿ ವಿದ್ಯುತ್ ಉಪಕೇಂದ್ರ ಮಂಜೂರು ಮಾಡುವುದು, ಭಗತ್ ಸಿಂಗ್ ಕಾಲೋನಿಗೆ ಶಾಶ್ವತ ವಿದ್ಯುತ್ ಸಂಪರ್ಕ ಕಲ್ಪಿಸುವುದು ಹಾಗೂ ಬಳ್ಳಯ್ಯನ ಕಟ್ಟೆಯಿಂದ ಹಟ್ಟಿ ಮುಖ್ಯರಸ್ತೆಯವರೆಗೆ ಸಿಸಿ ರಸ್ತೆ ನಿರ್ಮಾಣ ಸೇರಿದಂತೆ ಹಲವು ಜನಪರ ಬೇಡಿಕೆಗಳನ್ನು ಮುಂದಿಟ್ಟು ಪ್ರತಿಭಟನಾಕಾರರು ರಸ್ತೆ ತಡೆ ನಡೆಸಿದರು. ಇದರಿಂದ ಕೆಲಕಾಲ ವಾಹನ ಸಂಚಾರ ಅಸ್ತವ್ಯಸ್ತಗೊಂಡಿತು.

ಪ್ರತಿಭಟನೆಯನ್ನು ಉದ್ದೇಶಿಸಿ



ಸಿಐಟಿಯು ಮುಖಂಡ ಶಬ್ಬೀರ್ ಜಾಲಹಳ್ಳಿ ಮಾತನಾಡಿ, ಗ್ರಾಮದಲ್ಲಿ ಒಳಚರಂಡಿಗಳು ಉಳುತುಂಬಿ ದುರ್ವಾಸನೆ ಬೀರುತ್ತಿವೆ. ಲಕ್ಷಾಂತರ ರೂಪಾಯಿ ತೆರಿಗೆ ಸಂಗ್ರಹವಾಗುತ್ತಿದ್ದರೂ ಅಭಿವೃದ್ಧಿ ಕಾಣುತ್ತಿಲ್ಲ. ಜನರ ಹಣ ಎಲ್ಲಿ ಖರ್ಚಾಗುತ್ತಿದೆ ಎಂಬುದಕ್ಕೆ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಉತ್ತರಿಸಬೇಕು. ಕೋಟ್ಯಂತರ ರೂಪಾಯಿ ವೆಚ್ಚದ ಕಟ್ಟಡಗಳು ವರ್ಷಗಳಾದರೂ ಪೂರ್ಣಗೊಳ್ಳುತ್ತಿಲ್ಲ. ಪೂರ್ಣಗೊಂಡ ಕಾಮಗಾರಿಗಳೂ ಕಳಪೆ ಗುಣಮಟ್ಟದಿಂದ ಕೂಡಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಗಿರಿಯಪ್ಪ ಪೂಜಾರಿ ಮಾತನಾಡಿ, 14 ವರ್ಷಗಳಾದರೂ ವಾಲ್ಮೀಕಿ ಭವನ ನಿರ್ಮಾಣ ಪೂರ್ಣಗೊಂಡಿಲ್ಲ. ಪ್ರತಿಯೊಂದು ಕಾಮಗಾರಿಯಲ್ಲೂ ಕಮಿಷನ್ ಹಾಗೂ ಭ್ರಷ್ಟಾಚಾರ ಹೆಚ್ಚಿರುವುದ-ರಿಂದ ಅಭಿವೃದ್ಧಿ ಕುಂಠಿತವಾಗಿದೆ. ಸಾರ್ವಜನಿಕರ ಹಣದ ದುರುಪಯೋಗವನ್ನು ಸಹಿಸಲಾಗುವುದಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ನರಸಣ್ಣ ನಾಯಕ ಮಾತನಾಡಿ, ಕಲ್ಯಾಣ ಕರ್ನಾಟಕ ಅಭಿವೃದ್ಧಿಗೆ ಮೀಸಲಾದ ಸಾವಿರಾರು ಕೋಟಿ ರೂಪಾಯಿ ಅನುದಾನ ಎಲ್ಲಿಗೆ ಹೋಗುತ್ತಿದೆ ಎಂಬ ಪ್ರಶ್ನೆಗೆ ಉತ್ತರ ಸಿಗುತ್ತಿಲ್ಲ. ಒಂದು ತಿಂಗಳಲ್ಲೇ ಕಿತ್ತುಹೋಗುವ ರಸ್ತೆಗಳ ನಿರ್ಮಾಣ ನಡೆಯುತ್ತಿದೆ. ಜನರ ತೆರಿಗೆ ಹಣದ ದುರುಪಯೋಗವನ್ನು ಖಂಡಿಸುತ್ತೇವೆ. ಬೇಡಿಕೆಗಳು ಈಡೇರದಿದ್ದರೆ ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸಲಾಗುವುದು ಎಂದು ಎಚ್ಚರಿಕೆ ನೀಡಿದರು. ವಿದ್ಯಾರ್ಥಿ ಮುಖಂಡ ಮಹಾಲಿಂಗ ದೊಡ್ಡಮನಿ ಮಾತನಾಡಿ, ಗ್ರಾಮಾಭಿವೃದ್ಧಿ ಕಾಮಗಾರಿಗಳಲ್ಲಿ ಪಾರದರ್ಶಕತೆ ಹಾಗೂ ಗುಣಮಟ್ಟ ಕಾಪಾಡುವಂತೆ ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಮುಖಂಡರಾದ ಮುಕ್ತುಂ ಬಾಷಾ, ರಿಯಾಜ್ ಆರ್ತಿ, ರಾಜು ನಾಯಕ, ಮೌನೇಶ್ ಜಾಲಹಳ್ಳಿ, ರಂಗನಾಥ ಬಂಕಲದೊಡ್ಡಿ, ರಂಗಪ್ಪ ನಾಯಕ, ಹನುಮಂತ ಗುರಿಕಾರ, ಕಲೀಮ್ ಉದ್ದರ್, ಮಲ್ಲು ಗೌಡರ್, ವೆಂಕಟೇಶ್ ನಾಯಕ, ತಿಮ್ಮಣ್ಣ ನಾಯಕ, ಮೆಹಬೂಬ್ ಕುರುಕುಂದಿ, ರಿಯಾಝ್ ಕುರೇಶಿ, ಅಮೀರ್ ಪಟೇಲ್, ಮೆಹಬೂಬ್ ಕುರೇಶಿ, ನಿಂಗಣ್ಣ, ಯಲ್ಲಪ್ಪ, ನಬಿ ಟೈಲರ್, ಶಿವಮನ್ಯಪ್ಪ, ಕೊಂಡಯ್ಯ, ಬಾಲು ನಾಯಕ, ಸಂತೋಷ್ ನಾಯಕ,

**ಲಿಖಿತ ಭರವಸೆ ಬಳಿಕ ಹೋರಾಟ ಹಿಂಪಡೆದ ಡಿವೈಎಫ್‌ಐ ಪ್ರತಿಭಟನೆಯ ತೀವ್ರತೆಗೆ ಸ್ಪಂದಿಸಿದ ಕೆಕೆಆರ್‌ಡಿಬಿ ಅಧಿಕಾರಿಗಳು ಪ್ರತಿಭಟನಾಕಾರರ ಸಮ್ಮುಖದಲ್ಲೇ ಕಳಪೆ ಸಿಸಿ ರಸ್ತೆಯನ್ನು ಅಗೆಯಿಸಿ ಮರುನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿದರು**

ಅಭಿಷೇಕ್ ಸೇರಿದಂತೆ ಅನೇಕರು ಭಾಗವಹಿಸಿದ್ದರು. ಸ್ಥಳಕ್ಕೆ ಭೇಟಿ ನೀಡಿದ ಜೆಸ್ಕಾಂ ಎಇಇ ಹಾಗೂ ಉಪತಹಶೀಲ್ದಾರರು ಧರಣಿ ನಿರತ ಮುಖಂಡರೊಂದಿಗೆ ಚರ್ಚಿಸಿ, ಭಗತ್ ಸಿಂಗ್ ಕಾಲೋನಿಗೆ ಆಗಸ್ಟ್ 15ರೊಳಗೆ ಶಾಶ್ವತ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು ಎಂದು ಲಿಖಿತ ಭರವಸೆ ನೀಡಿದರು. ಜೊತೆಗೆ 110 ಕೆವಿ ವಿದ್ಯುತ್ ಉಪಕೇಂದ್ರಕ್ಕೆ ಸಂಬಂಧಿಸಿದ ಪಹಣಿ ದಾಖಲೆ ದೊರೆತ ಒಂದು ತಿಂಗಳೊಳಗೆ ಕಟ್ಟಡ ಕಾಮಗಾರಿ ಆರಂಭಿಸಲಾಗುವುದು ಎಂದು ಭರವಸೆ ನೀಡಿದರು. ಈ ಹಿನ್ನೆಲೆಯಲ್ಲಿ ಡಿವೈಎಫ್‌ಐ ಮುಖಂಡರು ರಸ್ತೆ ತಡೆ ಹೋರಾಟವನ್ನು ಹಿಂಪಡೆದರು. ದೇವದುರ್ಗ ಸಿಪಿಐ ಪುಂಡಲೀಕ್ ಅವರ ನೇತೃತ್ವದಲ್ಲಿ ಸೂಕ್ತ ಪೊಲೀಸ್ ಬಂದೋಬಸ್ತ್ ಒದಗಿಸಲಾಗಿತ್ತು ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ

## ಸಾಹಿತ್ಯ ಸಿಂಚನ

### ಆತ್ಮವಿಶ್ವಾಸ

ಆತ್ಮವಿಶ್ವಾಸವೆಂಬುದು ಅಮೂಲ್ಯ ಸಂಪತ್ತು,
ಅದು ಜೀವನದ ಯಶಸ್ಸಿನ ನಿಜವಾದ ಮುತ್ತು.

ಮನದೊಳಗೆ ನಂಬಿಕೆಯ ದೀಪ ಹೊತ್ತಾಗ,
ಕತ್ತಲೆಯ ದಾರಿಯೂ ಬೆಳಕಾಗುತ್ತದೆ.

ಸೋಲುಗಳು ಬಂದರೂ ಹೆದರದ ಮನ,
ಗೆಲುವಿನ ಕನಸಿಗೆ ಕಟ್ಟುವ ಬಂಧನ.

ಕಷ್ಟಗಳ ಪರ್ವತ ಎದುರಾದರೂ,
ಧೈರ್ಯದ ಹೆಜ್ಜೆ ಎಂದೂ ನಿಲ್ಲದು.

"ನನಗೆ ಸಾಧ್ಯ" ಎನ್ನುವ ಒಂದು ಮಾತು,
ಬದುಕಿನ ದಿಕ್ಕನ್ನೇ ಬದಲಿಸುವ ಶಕ್ತಿ.

ಪರಿಶ್ರಮದ ಬೆವರಿನ ಪ್ರತಿಯೊಂದು ಹನಿ,
ಭವಿಷ್ಯದ ಕನಸುಗಳಿಗೆ ಅಮೃತಧಾರೆ.

ಭಯವನ್ನು ದೂರ ತಳ್ಳಿ ಸಾಗಿದರೆ,
ಹೊಸ ಅವಕಾಶಗಳು ಬಾಗಿಲು ತೆರೆಯುವುವು.

ಸೂರ್ಯನು ಪ್ರತಿದಿನ ಉದಯಿಸುವಂತೆ,
ಆಶೆಯೂ ಪ್ರತಿದಿನ ಅರಳಬೇಕು.

ಇತರರ ಮಾತಿಗೆ ಕುಗ್ಗಬೇಡ,
ಸ್ವಂತ ಸಾಮರ್ಥ್ಯದ ಮೇಲೆ ನಂಬಿಕೆ ಇಡು.

ಆತ್ಮವಿಶ್ವಾಸವೇ ನಿನ್ನ ನಿಜವಾದ ಗೆಳೆಯ,
ಅದು ಎಂದಿಗೂ ಕೈಬಿಡದ ಸಂಗಾತಿ.

ಮುಳ್ಳಿನ ದಾರಿಯಲ್ಲೂ ಹೂವು ಅರಳುತ್ತದೆ,
ದೃಢ ಸಂಕಲ್ಪವಿದ್ದರೆ ಕನಸು ನನಸಾಗುತ್ತದೆ.

ಸಮುದ್ರದ ಅಲೆಗಳು ತಡೆಯಾದರೂ,
ದೋಣಿ ತೀರವನ್ನು ಸೇರುವಂತೆ.

ನಿನ್ನ ಗುರಿಯತ್ತ ನಿರಂತರ ನಡೆಯು,
ವಿಧಿಯೂ ನಿನ್ನೊಂದಿಗೆ ಕೈಜೋಡಿಸಲಿ.

ಪ್ರತಿಯೊಂದು ಸೋಲು ಹೊಸ ಪಾಠ,
ಪ್ರತಿಯೊಂದು ಗೆಲುವು ಹೊಸ ಪ್ರೇರಣೆ.

ಸ್ವತಃ ಮೇಲೆ ನಂಬಿಕೆ ಇಟ್ಟವನೇ,
ಜಗತ್ತಿನ ಹೃದಯ ಗೆಲ್ಲುವವನು.

ಆತ್ಮವಿಶ್ವಾಸವೇ ಬದುಕಿನ ಉಸಿರು,
ಅದೇ ಯಶಸ್ಸಿನ ಶಾಶ್ವತ ದಾರಿದೀಪ.

–ಶ್ರೀಮತಿ ಕವಿತಾ ಹಿರೇಮಠ್

## ಸೋಂಕಿತ ಈಡೀಸ್ ಸೊಳ್ಳೆಗಳು ಕಚ್ಚುವಿಕೆಯಿಂದ ಡೆಂಗ್ಯೂ ಹರಡುತ್ತದೆ ಸೊಳ್ಳೆಗಳು ಕಚ್ಚುವಿಕೆಯಿಂದ ಜಾಗೃತಿವಹಿಸಿ

❏ ನೈಜ್ಯ ದೇಸೆ ನ್ಯೂಸ್

**ಸಿಂಧನೂರು: ಜಿಲ್ಲಾ ಆಡಳಿತ ಜಿಲ್ಲಾ ಪಂಚಾಯತ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಜಿಲ್ಲಾ ಆಶ್ರಿತ ರೋಗಗಳ ನಿಯಂತ್ರಣ ವಿಭಾಗ ರಾಯಚೂರು ಪ್ರಾಥಮಿಕ ಆರೋಗ್ಯ ಕೇಂದ್ರ ಜವಳಗೇರಾ ಅಂಗನವಾಡಿ ಕೇಂದ್ರ ಜವಳಗೇರಾದಲ್ಲಿ ಇವರ ಸಂಯುಕ್ತ ಆಶ್ರಯದಲ್ಲಿ ಡೆಂಗ್ಯೂ ಜ್ವರ ತಡೆಗಟ್ಟಲು ಮುಂಜಾಗ್ರತೆ ಕ್ರಮಗಳ ಕುರಿತು ತಾಯಿಂದಿರಿಗೆ ಜಾಗೃತಿ ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.**

ನಂತರ ಮಾತನಾಡಿದ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಬಾಲಪ್ಪ ನಾಯಕ ಡೆಂಗ್ಯೂ ಜ್ವರ ತಡೆಗಟ್ಟಲು ಮುನ್ನೆಚ್ಚರಿಕೆಗಳ ಕ್ರಮಗಳ ಕುರಿತು ಅವರು ಮಾತನಾಡಿ ಡೆಂಗ್ಯೂ ಎಂಬುದು ಡೆಂಗ್ಯೂ ವೈರಸ್ ನಿಂದ ಬರುವ ಜ್ವರ ರೋಗವಾಗಿದ್ದು, ಸೋಂಕಿತ ಈಡೀಸ್ ಸೊಳ್ಳೆಗಳ ಕಚ್ಚುವಿಕೆಯಿಂದ ಹರಡುತ್ತದೆ. ಮಳೆಗಾಲದಲ್ಲಿ ಇದರ ಅಪಾಯ ಹೆಚ್ಚಾಗಿರುತ್ತದೆ.



ಡೆಂಗ್ಯೂಗೆ ವಿಶೇಷ ಔಷಧಿ ಇಲ್ಲದಿದ್ದರೂ, ಬೇಗ ಗುರುತಿಸಿ ಸರಿಯಾದ ಚಿಕಿತ್ಸೆ ಪಡೆದರೆ ಹೆಚ್ಚಿನವರು ಸಂಪೂರ್ಣವಾಗಿ ಚೇತರಿಸಿಕೊಳ್ಳುತ್ತಾರೆ. ಸೊಳ್ಳೆಗಳ ಉತ್ಪತ್ತಿಯನ್ನು ತಡೆಯುವುದು ಡೆಂಗ್ಯೂ ನಿಯಂತ್ರಣದ ಅತ್ಯುತ್ತಮ ಮಾರ್ಗವಾಗಿದೆ ಎಂದರು ತಿಳಿಸಿದರು,

ನಂತರ ಮಾತನಾಡಿದ ಆರೋಗ್ಯ ನಿರೀಕ್ಷಣಾಧಿಕಾರಿಳಾದ ಅಂಬಮ್ಮ ಅವರು ಡೆಂಗ್ಯೂ ಜ್ವರದ ಲಕ್ಷಣಗಳಾದ ಹೆಚ್ಚಿನ ಜ್ವರ ತೀವ್ರ ತಲೆನೋವು ಕಣ್ಣುಗಳ ಹಿಂದೆ ನೋವು ಸ್ನಾಯು ಮತ್ತು ಸಂಧಿ ನೋವು. ವಾಂತಿ ಅಥವಾ ವಾಕರಿಕೆ ಚರ್ಮದ ಮೇಲೆ ಕೆಂಪು ಚುಕ್ಕೆಗಳು ತೀವ್ರ ಸಂದರ್ಭಗಳಲ್ಲಿ ರಕ್ತಸ್ರಾವ. ಕಂಡುಬರುವ ಸಾಧ್ಯತೆ ಹೆಚ್ಚು ಇಂತಹ ಲಕ್ಷಣಗಳು ಕಂಡು ಬಂದರೆ ಕೂಡಲೇ ಹತ್ತಿರದ ಆಸ್ಪತ್ರೆಯಲ್ಲಿ ತಪಾಸಣೆ ಮಾಡಿಸಿಕೊಳ್ಳಿ. ಡೆಂಗ್ಯೂ ಜ್ವರದ ಮುಂಜಾಗ್ರತಾ. ಈ ಕ್ರಮಗಳನ್ನು. ಮನೆಯ ಸುತ್ತಮುತ್ತ ನೀರು ನಿಲ್ಲದಂತೆ ನೋಡಿಕೊಳ್ಳಿ.ನೀರಿನ ಟ್ಯಾಂಕ್‌ಗಳು, ಡ್ರಮ್‌ಗಳು ಮತ್ತು ಪಾತ್ರೆಗಳನ್ನು ಮುಚ್ಚಿಡಿ. ವಾರಕ್ಕೊಮ್ಮೆ ನೀರು ಸಂಗ್ರಹಿಸುವ ಪಾತ್ರೆಗಳನ್ನು ಸ್ವಚ್ಛಗೊಳಿಸಿ.ಸೊಳ್ಳೆ ಜಾಲರಿ, ಸೊಳ್ಳೆ ನಿವಾರಕ ಕ್ರೀಮ್ ಅಥವಾ ಸ್ಪ್ರೇ ಬಳಸಿ.ಪೂರ್ಣ ತೋಳುಗಳ ಬಟ್ಟೆ ಧರಿಸಿ. ಕೈಗೊಳ್ಳಬೇಕಾದದ್ದು ಅಗತ್ಯವಿದೆ ಎಂದರು.

ಈ ಸಂದರ್ಭದಲ್ಲಿ ಪ್ರಾಥಮಿಕ ಆರೋಗ್ಯ ಸುರಕ್ಷಾ ಅಧಿಕಾರಿಗಳಾದ ರಾಧಾ ಕೊಂಡಿ. ಆಶಾ ಕಾರ್ಯಕರ್ತೆಯರ ಶರಣಮ್ಮ . ದುರ್ಗಮ್ಮ ಲಕ್ಷ್ಮಿ .ನೂರಜಾ . ಅಂಗನವಾಡಿ ಕಾರ್ಯಕರ್ತೆ ಚನ್ನಬಸ್ಸಮ್ಮ ತಾಯಿಂದಿರು ಉಪಸ್ಥಿತರಿದ್ದರು

## ಸಾಮಾಜಿಕ ಭದ್ರತಾ ಮಾಸಾಶನ ಬಿಡುಗಡೆಗೆ ಆಗ್ರಹಿಸಿ ಸಿಎಂಗೆ ಮನವಿ



❏ ನೈಜ್ಯ ದೇಸೆ ನ್ಯೂಸ್

**ಮಾನ್ವಿ: ವಿಕಲಚೇತನರು, ಹಿರಿಯ ನಾಗರಿಕರು ಹಾಗೂ ವಿಧವೆಯರ ಸಾಮಾಜಿಕ ಭದ್ರತಾ ಮಾಸಾಶನವನ್ನು ತಕ್ಷಣ ಬಿಡುಗಡೆಗೊಳಿಸುವುದು, ವಾರ್ಷಿಕ ?32,000 ಆದಾಯ ಮಿತಿಯನ್ನು ರದ್ದುಪಡಿಸುವುದು, ಮಾಸಾಶನದ ಮೊತ್ತವನ್ನು ಹೆಚ್ಚಿಸುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಸಂಕಲ್ಪ ವಿಕಲಚೇತನರ ಒಕ್ಕೂಟ, ರಾಯಚೂರು ಜಿಲ್ಲೆ ವತಿಯಿಂದ ಸೋಮವಾರ ಮಾನ್ವಿ ತಹಸೀಲ್ದಾರ್ ಭೀಮರಾವ್ ಬಿ ರಾಮಸಮುದ್ರ ರವರ ಮೂಲಕ ಮುಖ್ಯಮಂತ್ರಿ ಅವರಿಗೆ ಮನವಿ ಸಲ್ಲಿಸಲಾಯಿತು.**

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾಧ್ಯಕ್ಷ ಶಿವಕುಮಾರ್ ಚಲ್ಮಲ್ ಅವರು, ಸಾಮಾಜಿಕ ಭದ್ರತಾ ಮಾಸಾಶನವು ಸರ್ಕಾರದ ದಾನವಲ್ಲ, ಸಂವಿಧಾನ ನೀಡಿರುವ ಘನತೆಯಿಂದ ಬದುಕುವ ಹಕ್ಕಿನ ಭಾಗವಾಗಿದೆ. ವಾರ್ಷಿಕ ?32,000 ಆದಾಯ ಮಿತಿಯಿಂದ ಸಾವಿರಾರು ವಿಕಲಚೇತನರು, ಹಿರಿಯ ನಾಗರಿಕರು ಹಾಗೂ ವಿಧವೆಯರ ಮಾಸಾಶನ ಸ್ಥಗಿತಗೊಂಡಿದ್ದು, ಅವರ ಬದುಕು ಸಂಕಷ್ಟಕ್ಕೆ ಸಿಲುಕಿದೆ. ಇಂದಿನ ಬೆಲೆ ಏರಿಕೆಯ ಪರಿಸ್ಥಿತಿಯಲ್ಲಿ ಈ ಆದಾಯ ಮಿತಿ ಅವೈಜ್ಞಾನಿಕವಾಗಿದ್ದು, ಸರ್ಕಾರ ಕೂಡಲೇ ಅದನ್ನು ರದ್ದುಪಡಿಸಬೇಕು ಅಥವಾ ಮರುಪರಿಶೀಲನೆ ನಡೆಸಬೇಕು. ಬಾಕಿ ಉಳಿದಿರುವ ಎಲ್ಲಾ ಮಾಸಾಶನವನ್ನು ಒಂದೇ ಕಂತಿನಲ್ಲಿ ಬಿಡುಗಡೆ ಮಾಡಿ, ಮಾಸಾಶನದ ಮೊತ್ತವನ್ನು ಜೀವನ ವೆಚ್ಚಕ್ಕೆ ಅನುಗುಣವಾಗಿ ಹೆಚ್ಚಿಸಬೇಕು ಎಂದು ಆಗ್ರಹಿಸಿದರು.

ಗೌರವಾಧ್ಯಕ್ಷ ದೇಸಾಯಿ ದೊತರಬಂಡಿ ಮಾತನಾಡಿ, ವಿಕಲಚೇತನರು, ಹಿರಿಯ ನಾಗರಿಕರು ಹಾಗೂ ವಿಧವೆಯರಿಗೆ ಸಾಮಾಜಿಕ ಭದ್ರತಾ ಯೋಜನೆಗಳು ಬದುಕಿನ ಏಕೈಕ ಆಧಾರವಾಗಿವೆ. ಯಾವುದೇ ಪೂರ್ವ ಮಾಹಿತಿ ಅಥವಾ ಸಮರ್ಪಕ ಪರಿಶೀಲನೆಯಿಲ್ಲದೆ ಮಾಸಾಶನ ಸ್ಥಗಿತಗೊಳಿಸುವುದು ಮಾನವೀಯತೆಗೂ ಹಾಗೂ ಸಂವಿಧಾನದ ಆಶಯಕ್ಕೂ ವಿರುದ್ಧವಾಗಿದೆ. ಅಂಗವೈಕಲ್ಯ ಹೊಂದಿದ ವ್ಯಕ್ತಿಗಳ ಹಕ್ಕುಗಳ ಕಾಯ್ದೆ–2016ರ ಆಶಯದಂತೆ ಸರ್ಕಾರವು ಸಾಮಾಜಿಕ ಭದ್ರತೆಯನ್ನು ಖಚಿತಪಡಿಸಿ, ಅರ್ಹ ಫಲಾನುಭವಿಗಳಿಗೆ ಯಾವುದೇ ತೊಂದರೆಯಾಗದಂತೆ ಶಾಶ್ವತ ಹಾಗೂ ಪಾರದರ್ಶಕ ವ್ಯವಸ್ಥೆಯನ್ನು ರೂಪಿಸಬೇಕು ಎಂದು ಒತ್ತಾಯಿಸಿದರು.

ಮನವಿಯಲ್ಲಿ ಸ್ಥಗಿತಗೊಂಡಿರುವ ಎಲ್ಲಾ ಮಾಸಾಶನವನ್ನು ತಕ್ಷಣ ಬಿಡುಗಡೆ ಮಾಡುವುದು, ವಾರ್ಷಿಕ ?32,000 ಆದಾಯ ಮಿತಿಯನ್ನು ರದ್ದುಪಡಿಸುವುದು ಅಥವಾ ಪರಿಷ್ಕರಿಸುವುದು, ಬಾಕಿ ಮೊತ್ತವನ್ನು ಒಂದೇ ಕಂತಿನಲ್ಲಿ ಪಾವತಿಸುವುದು, ಮಾಸಾಶನದ ಮೊತ್ತವನ್ನು ಹೆಚ್ಚಿಸುವುದು ಹಾಗೂ ಯಾವುದೇ ಅರ್ಹ ಫಲಾನುಭವಿಯ ಮಾಸಾಶನವನ್ನು ಪೂರ್ವ ಮಾಹಿತಿ ಇಲ್ಲದೆ ಸ್ಥಗಿತಗೊಳಿಸದಂತೆ ಕ್ರಮ ಕೈಗೊಳ್ಳುವಂತೆ ಸರ್ಕಾರವನ್ನು ಆಗ್ರಹಿಸಲಾಗಿದೆ.

ಈ ಸಂದರ್ಭದಲ್ಲಿ ಜಿಲ್ಲಾ ಉಪಾಧ್ಯಕ್ಷೆ ಸಾವಿತ್ರಮ್ಮ, ಮೌನೇಶ್, ಅನಿಲ್ ಕುಮಾರ್, ಬಿ.ಸುರೇಶ್, ಮಹಾದೇವಪ್ಪ ಹೂಗಾರ, ಮಂಜುನಾಥ, ಚಂದ್ರಶೇಖರ, ಅಯೂಬ್, ಬಸವರಾಜ್ ಆರೋಲಿ, ಚನ್ನಪ್ಪ ಸೇರಿದಂತೆ ಇನ್ನಿತರರು ಇದ್ದರು.

## ವಿಶ್ವಕರ್ಮ ಸಮಾಜದ ಪ್ರತಿಭಾ ಪುರಸ್ಕಾರ ಹಾಗೂ ಸಾಧಕರಿಗೆ ಸನ್ಮಾನ ಸಮಾರಂಭ ಯಶಸ್ವಿ

❏ ನೈಜ್ಯ ದೇಸೆ ನ್ಯೂಸ್

**ಕೊಪ್ಪಳ: ಕೊಪ್ಪಳದಲ್ಲಿ ಇಂದು ವಿಶ್ವಕರ್ಮ ಸಮಾಜದ ವತಿಯಿಂದ ಆಯೋಜಿಸಲಾದ 'ಪ್ರತಿಭಾ ಪುರಸ್ಕಾರ ಹಾಗೂ ನಿವೃತ್ತ ಸರ್ಕಾರಿ ನೌಕರರು ಮತ್ತು ಸಾಧಕರಿಗೆ ಸನ್ಮಾನ ಸಮಾರಂಭ'ವು ಅತ್ಯಂತ ವಿಜೃಂಭಣೆಯಿಂದ ಹಾಗೂ ಅರ್ಥಪೂರ್ಣವಾಗಿ ಜರುಗಿತು. ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ವಿಶ್ವಕರ್ಮ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಶ್ರೀ ಸುಜ್ಞಾನ ಮೂರ್ತಿಯವರು ದೀಪ ಬೆಳಗುವ ಮೂಲಕ ಉದ್ಘಾಟಿಸಿದರು.**

ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಶ್ರೀ ಸುಜ್ಞಾನ ಮೂರ್ತಿಯವರು, "ಸಮಾಜದ ಬಾಂಧವರು ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ನಮ್ಮ ಯುವಜನತೆ ಕೇವಲ ಶಿಕ್ಷಣದಲ್ಲಿ ಮಾತ್ರವಲ್ಲದೆ, ತಾಂತ್ರಿಕ ಹಾಗೂ ಕೌಶಲ್ಯಯುತ ಕ್ಷೇತ್ರಗಳಲ್ಲೂ ಸಾಧನೆ ಮಾಡಬೇಕು. ನಿವೃತ್ತ ನೌಕರರು ಸಮಾಜದ ದಾರಿದೀಪಗಳು, ಅವರ ಅನುಭವವನ್ನು ಯುವಪೀಳಿಗೆ



ಬಳಸಿಕೊಳ್ಳಬೇಕು," ಎಂದು ಕರೆ ನೀಡಿದರು. ಶೈಕ್ಷಣಿಕ ಕ್ಷೇತ್ರದಲ್ಲಿ ಉತ್ತಮ ಸಾಧನೆ ತೋರಿದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸಿ, ಅವರಿಗೆ ಪ್ರಶಸ್ತಿ ಪತ್ರ ಹಾಗೂ ಪುರಸ್ಕಾರವನ್ನು ನೀಡಿ ಸನ್ಮಾನಿಸಲಾಯಿತು.

ವಿದ್ಯಾರ್ಥಿಗಳಲ್ಲಿ ಸ್ಫೂರ್ತಿ ತುಂಬುವುದು ಈ ಪುರಸ್ಕಾರದ ಮುಖ್ಯ ಉದ್ದೇಶವಾಗಿತ್ತು.ಸಮಾಜದ ಏಳಿಗೆಗಾಗಿ ದುಡಿದವರು ಹಾಗೂ ಸರ್ಕಾರಿ ಸೇವೆಯಿಂದ ನಿವೃತ್ತಿ ಹೊಂದಿದ ಹಿರಿಯರನ್ನು ವೇದಿಕೆಯಲ್ಲಿ ಗೌರವಪೂರ್ವಕವಾಗಿ ಸನ್ಮಾನಿಸಲಾಯಿತು. ಅವರ ಸುದೀರ್ಘ ಸೇವೆಯನ್ನು ಸ್ಮರಿಸಲಾಯಿತು.ಕಾರ್ಯಕ್ರಮದಲ್ಲಿ ಸಮಾಜದ ಗುರುಗಳು, ಸ್ಥಳೀಯ ವಿಶ್ವಕರ್ಮ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಸಮುದಾಯದ ಗಣ್ಯರು ಭಾಗವಹಿಸಿ, ಒಗ್ಗಟ್ಟಿನ ಸಂದೇಶವನ್ನು ಸಾರಿದರು. ಈ ಕಾರ್ಯಕ್ರಮವು ಕೇವಲ ಸನ್ಮಾನಕ್ಕೆ ಸೀಮಿತವಾಗದೆ, ಸಮುದಾಯದ ಯುವಕರಿಗೆ ಶಿಕ್ಷಣದ ಮಹತ್ವವನ್ನು ತಿಳಿಸುವ ಮತ್ತು ಸಮಾಜದ ಹಿರಿಯರಿಗೆ ಗೌರವ ಸಲ್ಲಿಸುವ ವೇದಿಕೆಯಾಗಿತ್ತು.

ಸಂಘಟನೆಯ ಮೂಲಕ ಸಮಾಜದ ಸರ್ವತೋಮುಖ ಅಭಿವೃದ್ಧಿ ಸಾಧ್ಯ ಎಂಬ ದೃಢ ನಿರ್ಧಾರವನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸಲಾಯಿತು. ಈ ಸಮಾರಂಭದಲ್ಲಿ ಸಮುದಾಯದ ವಿವಿಧ ಮುಖಂಡರು, ಸಂಘಟನೆಯ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

## ನೀಟ್ ಅಕ್ರಮ ನೈತಿಕ ಹೊಣೆ ಹೊತ್ತು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ ಪ್ರಧಾನ್ ರಾಜಿನಾಮೆ ನೀಡಲಿ

❏ ನೈಜ್ಯ ದೇಸೆ ನ್ಯೂಸ್

ಸಿಂಧನೂರು: ನವದೆಹಲಿ ಜಂತರ್–ಮಂತರ್‌ನಲ್ಲಿ ಶಾಂತಿಯುತವಾಗಿ ಪ್ರತಿಭಟಿಸಿದ ವಿದ್ಯಾರ್ಥಿಗಳು, ಯುವಕರು, ಹಾಗೂ ಹೋರಾಟಗಾರರ ಮೇಲೆ ಮೋದಿ ನೇತೃತ್ವದ ಸರ್ಕಾರ ಆರ್‌ಎಸ್‌ಎಸ್–ಹಿಂದೂತ್ವದ ಸರ್ಕಾರ ಪೊಲೀಸರಿಂದ ನಡೆಸುತ್ತಿರುವ ಲಾಠಿ ಚಾರ್ಜ್ ಪ್ರಜಾಪ್ರಭುತ್ವದ ಹಕ್ಕುಗಳ ಮೇಲಿನ ನೇರ ದಾಳಿಯಾಗಿದೆ ಎಂದು ಸಿಪಿಐಎಂಎಲ್ ಮಾಸ್ ಲೈನ್ ಜಿಲ್ಲಾ ಕಾರ್ಯದರ್ಶಿ ಬಿ.ಎನ್.ಯರದಿಹಾಳ ಖಂಡಿಸಿದ್ದಾರೆ.



ಈ ಕುರಿತು ಸೋಮವಾರ ಪತ್ರಿಕಾ ಹೇಳಿಕೆ ನೀಡಿದ ಅವರು, “ಜನರ ಪ್ರಶ್ನೆಗಳಿಗೆ ಉತ್ತರ ಕೊಡಲು ವಿಫಲವಾಗಿರುವ ಕೇಂದ್ರ ಸರ್ಕಾರವು ಸಂವಾದದ ಬದಲಿಗೆ ದಮನವನ್ನು ಆಯ್ಕೆ ಮಾಡಿಕೊಂಡಿದೆ. ಲಾಠಿಚಾರ್ಜ್, ಬಂಧನ ಮತ್ತು ಬೆದರಿಕೆಗಳ ಮೂಲಕ ಜನರ ಹೋರಾಟವನ್ನು ಹತ್ತಿಕ್ಕಲು ಸಾಧ್ಯವಿಲ್ಲ. ಇಂತಹ ಫ್ಯಾಸಿಸ್ಟ್ ದಮನವನ್ನು ದೇಶದ ಪ್ರಜಾಪ್ರಭುತ್ವವಾದಿ, ಪ್ರಗತಿಪರ ಹಾಗೂ ದುಡಿಯುವ ಜನತೆಯನ್ನು ಒಗ್ಗಟ್ಟಿನಿಂದ ಸೋಲಿಸಬೇಕು” ಎಂದು ಕರೆ ನೀಡಿದರು. ಇಂತಹ ದಮನಕಾರಿ ಘಟನೆಯ ನೈತಿಕ ಹೊಣೆಯನ್ನು ಹೊತ್ತು, ಕೇಂದ್ರ ಶಿಕ್ಷಣ ಸಚಿವರು ರಾಜೀನಾಮೆಯನ್ನು ನೀಡಬೇಕು. ಬಂಧಿತರನ್ನು ಬಿಡುಗಡೆ ಮಾಡಬೇಕು. ಲಾಠಿ ಚಾರ್ಜ್‌ಗೆ ಕಾರಣರಾದವರ ವಿರುದ್ಧ ತಕ್ಷಣವೇ ಕ್ರಮ ಕೈಗೊಳ್ಳಬೇಕು. ಪ್ರತಿಭಟನಾಕಾರರ ಜೊತೆಗೆ ಸಂವಾದ ನಡೆಸಬೇಕೆಂದು ಕೇಂದ್ರ ಸರ್ಕಾರಕ್ಕೆ ಬಿ.ಎನ್.ಯರದಿಹಾಳ ಒತ್ತಾಯಿಸಿದರು.

## ಗಂಗಾನಗರದಲ್ಲಿ ಉಚಿತ ಆಯುಷ್ ಆರೋಗ್ಯ ಶಿಬಿರ ಯಶಸ್ವಿ

❏ ನೈಜ್ಯ ದೇಸೆ ನ್ಯೂಸ್

**ಸಿಂಧನೂರು: ರಾಷ್ಟ್ರೀಯ ಆಯುಷ್ ಅಭಿಯಾನದ ಅಡಿಯಲ್ಲಿ ಸರಕಾರಿ ಯುನಾನಿ ಚಿಕಿತ್ಸಾಲಯ, ಸಿಂಧನೂರು ಹಾಗೂ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ (ಖಎಆಖಆಕ) ಇವರ ಜಂಟಿ ಸಹಭಾಗಿತ್ವದಲ್ಲಿ *"ಕೀಲು, ಮೂಳೆ ವ್ಯಾಧಿಗಳು ಮತ್ತು ವಯೋಮಿತ್ರ ಆರೋಗ್ಯ ಆಯುಷ್ ಶಿಬಿರ"*ವನ್ನು ಗಂಗಾನಗರದಲ್ಲಿ ಯಶಸ್ವಿಯಾಗಿ ನಡೆಸಲಾಯಿತು.**

ಕಾರ್ಯಕ್ರಮದ ಅಧ್ಯಕ್ಷತೆಯನ್ನು



ಶ್ರೀಮತಿ ಮಹದೇವಮ್ಮ ವಹಿಸಿದ್ದರು. ಶಿಬಿರದಲ್ಲಿ ಸರಕಾರಿ ಯುನಾನಿ ಚಿಕಿತ್ಸಾಲಯದ ವೈದ್ಯಾಧಿಕಾರಿಗಳಾದ ಡಾ. ಅಮ್ಜದ್ ಶರೀಫ್ ಅವರು ವಯೋವೃದ್ಧರು ಆರೋಗ್ಯಕರ ಜೀವನಶೈಲಿಯನ್ನು ಅಳವಡಿಸಿಕೊಳ್ಳುವ ಅಗತ್ಯತೆಯ ಕುರಿತು ಮಾಹಿತಿ ನೀಡಿ, ವೈದ್ಯಕೀಯ ತಪಾಸಣೆ ನಡೆಸಿ ಅಗತ್ಯ ಚಿಕಿತ್ಸೆಯೊಂದಿಗೆ ಆರೋಗ್ಯ ಸಲಹೆಗಳನ್ನು ನೀಡಿದರು.

ಯೋಗ ತರಬೇತುದಾರ ರಜತ್ ಅವರು ವಯೋವೃದ್ಧರಿಗೆ ದೈನಂದಿನ ಜೀವನದಲ್ಲಿ ಅನುಸರಿಸಬಹುದಾದ ಸರಳ ಯೋಗಾಸನಗಳ ಬಗ್ಗೆ ಪ್ರಾಯೋಗಿಕ ತರಬೇತಿ ನೀಡಿದರು. ಖಎಆಖಆಕ ಜ್ಞಾನ ವಿಕಾಸ ವಿಭಾಗದ ಶ್ರೀಮತಿ ಸುಮಂಗಲ ಅವರು ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರೂಪಿಸಿದರು. ಶುಶ್ರೂಷಾಧಿಕಾರಿ ರಾಜಪ್ಪ ಅವರು ಶಿಬಿರದಲ್ಲಿ ಭಾಗವಹಿಸಿದ್ದ ವಯೋವೃದ್ಧರಿಗೆ ರಕ್ತದೊತ್ತಡ (BP) ಹಾಗೂ ಮಧುಮೇಹ (ಸಕ್ಕರೆ) ತಪಾಸಣೆ ನಡೆಸಿದರು. ಫಾರ್ಮಸಿ ಅಧಿಕಾರಿ ಭಾರ್ಗವ ಅವರು ಅಗತ್ಯವಿರುವವರಿಗೆ ಉಚಿತ ಆಯುಷ್ ಔಷಧಗಳನ್ನು ವಿತರಿಸಿದರು.

ಸಿಬ್ಬಂದಿಗಳಾದ ವಿಶ್ವನಾಥ ಮತ್ತು ಖಲಂದರ್ ಸೇರಿದಂತೆ ಎಲ್ಲರ ಸಹಕಾರದಿಂದ ಶಿಬಿರವು ಯಶಸ್ವಿಯಾಗಿ ನೆರವೇರಿತು.

## ರೈತರ ಹಿತಕ್ಕಾಗಿ ನಡೆದ ಪಾದಯಾತ್ರೆಗೆ ಕನ್ನಡ ಸೈನೆ ಕರ್ನಾಟಕ ಬೆಂಬಲ; ನೀರಿನ ಬಾಟಲ್ ವಿತರಣೆ

❏ ನೈಜ್ಯ ದೇಸೆ ನ್ಯೂಸ್

**ಮಾನ್ವಿ: ರೈತರ ಬದುಕು ಹಸನಾಗಲಿ ಹಾಗೂ ತುಂಗಭದ್ರ ಜಲಾಶಯ ಭರ್ತಿಯಾಗಿ ನಾಡು ಸುಭಿಕ್ಷವಾಗಲಿ ಎಂಬ ಸಂಕಲ್ಪದೊಂದಿಗೆ ಜನತಾದಳ ಜಾತ್ಯತೀತ ಪಕ್ಷದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಮಳೆಗಾಗಿ ಪಾದಯಾತ್ರೆಗೆ ಕನ್ನಡ ಸೈನೆ ಕರ್ನಾಟಕ ತಾಲೂಕು ಘಟಕ ಬೆಂಬಲ ಸೂಚಿಸಿ, ಪಾದಯಾತ್ರೆಯಲ್ಲಿ ಭಾಗವಹಿಸಿದ್ದ ಸಾವಿರಾರು ರೈತರು, ಕಾರ್ಯಕರ್ತರು ಹಾಗೂ ಸಾರ್ವಜನಿಕರಿಗೆ ಕುಡಿಯುವ ನೀರಿನ ಬಾಟಲ್‌ಗಳನ್ನು ವಿತರಿಸಿತು.**

ಈ ಸಂದರ್ಭದಲ್ಲಿ ಮಾತನಾಡಿದ ಕನ್ನಡ ಸೈನೆ ಕರ್ನಾಟಕ ತಾಲೂಕು ಅಧ್ಯಕ್ಷ ಬಸವರಾಜ ಮೈಲಾರಿ, "ರೈತರ ಹಿತಕ್ಕಾಗಿ ಹಮ್ಮಿಕೊಳ್ಳಲಾಗಿದ್ದ ಈ ಪಾದಯಾತ್ರೆಗೆ ನಮ್ಮಿಂದ ಒಂದು ಅಳಿಲು ಸೇವೆಯಾಗಿ ಕುಡಿಯುವ ನೀರಿನ ಬಾಟಲ್‌ಗಳನ್ನು



ವಿತರಿಸಿದ್ದೇವೆ. ರೈತರ ಒಳಿತಿಗಾಗಿ ನಡೆಯುವ ಹೋರಾಟಗಳಿಗೆ ನಮ್ಮ ಸಂಘಟನೆ ಸದಾ ಬೆಂಬಲವಾಗಿ ನಿಲ್ಲುತ್ತದೆ" ಎಂದು ಹೇಳಿದರು. ನಂತರ ಮಾತನಾಡಿದ ಪ್ರಧಾನ ಕಾರ್ಯದರ್ಶಿ ಶಿವಾನಂದ ನಾಯಕ, "ಮಾಜಿ ಶಾಸಕ ರಾಜಾ ವೆಂಕಟಪ್ಪ ನಾಯಕ ಅವರ ರೈತಪರ ಪಾದಯಾತ್ರೆಗೆ ನಮ್ಮ ತಾಲೂಕು ಘಟಕದ ಎಲ್ಲಾ ಪದಾಧಿಕಾರಿಗಳು ಸಂಪೂರ್ಣ ಬೆಂಬಲ ನೀಡಿದ್ದೇವೆ. ರೈತರ ಸಮಸ್ಯೆಗಳ ಪರಿಹಾರಕ್ಕಾಗಿ ಇಂತಹ ಹೋರಾಟಗಳು ನಿರಂತರವಾಗಿ ನಡೆಯಬೇಕಿದೆ. ನಮ್ಮ ಸಹಕಾರವೂ ಮುಂದುವರಿಯಲಿದೆ" ಎಂದು ತಿಳಿಸಿದರು.

ಸದಸ್ಯ ನಾಗರಾಜ್ ಶೆಟ್ಟಿ ಮಾತನಾಡಿ, "ರೈತರ ಪರವಾಗಿ ಹೋರಾಟ ಮಾಡುವವರ ಜೊತೆ ಭಗವಂತ ಯಾವತ್ತೂ ಇರುತ್ತಾನೆ ಎನ್ನುವುದಕ್ಕೆ ಪಾದಯಾತ್ರೆ ಆರಂಭವಾದ ಕೆಲವೇ ಹೊತ್ತಿನಲ್ಲಿ ಸುರಿದ ಮಳೆಯೇ ಸಾಕ್ಷಿ. ಉತ್ತಮ ಮಳೆಯಾಗಿ ರೈತರಿಗೆ ಒಳಿತಾಗಲಿ" ಎಂದು ಹೇಳಿದರು. ನಗರ ಘಟಕದ ಅಧ್ಯಕ್ಷ ಶೇಖ್ ಮುಸ್ತಫಾ ಮಾತನಾಡಿ, "ರೈತಪರ ಹಾಗೂ ಸಾಮಾಜಿಕ ಹೋರಾಟಗಳಿಗೆ ಕನ್ನಡ ಸೈನೆ ಕರ್ನಾಟಕ ಸಂಘಟನೆ ಸದಾ ಬೆಂಬಲವಾಗಿ ನಿಲ್ಲಲಿದೆ" ಎಂದು ಹೇಳಿದರು. ಈ ಸಂದರ್ಭದಲ್ಲಿ ಮಾತನಾಡಿದ ವೀರೇಶ್ ವಿಶ್ವಕರ್ಮ, "ಮಾಜಿ ಶಾಸಕ ರಾಜಾ ವೆಂಕಟಪ್ಪ ನಾಯಕ ಅವರು ರೈತರ ಹಿತಕ್ಕಾಗಿ ಹಮ್ಮಿಕೊಂಡಿದ್ದ ಈ ಪಾದಯಾತ್ರೆ ಶ್ಲಾಘನೀಯವಾಗಿದೆ. ರೈತರ ಪರವಾಗಿ ಅವರು ಕೈಗೊಂಡಿರುವ ಕಾರ್ಯಗಳು ಪ್ರಶಂಸನೀಯವಾಗಿದ್ದು, ಇಂತಹ ಜನಪರ ಕಾರ್ಯಕ್ರಮಗಳು ಇನ್ನಷ್ಟು ನಡೆಯಬೇಕು" ಎಂದು ಹೇಳಿದರು. ಈ ಸಂದರ್ಭದಲ್ಲಿ ಕರ್ನಾಟಕ ವೀರ ಸಮರ ಸಂಘದ ತಾಲೂಕು ಅಧ್ಯಕ್ಷ ಮಲ್ಲನಗೌಡ, ಸಾಜಿದ್, ಪ್ರಭು ಬಾಲನಗರ, ಸಿದ್ದಪ್ಪ ನಾಯಕ್, ಭೀಮೇಶ್ ನಾಯಕ್, ಸಂಜಯ್, ಬುಜ್ಜಿ ವಾಟರ್ ಪ್ಲಾಂಟ್‌ನ ಪ್ರತಿನಿಧಿಗಳು ಸೇರಿದಂತೆ ಕನ್ನಡ ಸೈನೆ ಕರ್ನಾಟಕದ ಪದಾಧಿಕಾರಿಗಳು, ಕಾರ್ಯಕರ್ತರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

## ನೇಮಕಾತಿ ಪ್ರಕಟಣೆ

**ಕರ್ನಾಟಕ ಕಂದಾಯ ಇಲಾಖೆ ನೇಮಕಾತಿ 2026 ? 572 ಗ್ರಾಮ ಆಡಳಿತ ಅಧಿಕಾರಿ (VAO) ಹುದ್ದೆಗಳಿಗೆ ಅರ್ಜಿ ಸಲ್ಲಿಸಿ 11 ಜುಲೈ 2026**

ಕರ್ನಾಟಕ ಕಂದಾಯ ಇಲಾಖೆ ನೇಮಕಾತಿ 2026: 572 ಗ್ರಾಮ ಆಡಳಿತ ಅಧಿಕಾರಿ (VAO) ಹುದ್ದೆಗಳ ನೇಮಕಾತಿಗಾಗಿ ಅಧಿಸೂಚನೆ. KEA (ಕರ್ನಾಟಕ ಪರೀಕ್ಷಾ ಪ್ರಾಧಿಕಾರ) 2026ರ ಜುಲೈ 11 ರಂದು ಅಧಿಕೃತ ಅಧಿಸೂಚನೆಯನ್ನು ಬಿಡುಗಡೆ ಮಾಡಿದೆ. ಕನಿಷ್ಠ 12ನೇ ತರಗತಿ ಉತ್ತೀರ್ಣರಾಗಿರುವ ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳು, ಕರ್ನಾಟಕ ಕಂದಾಯ ಇಲಾಖೆಯ 2026ರ ಅಧಿಕೃತ ಅಧಿಸೂಚನೆಯ ಮೂಲಕ ಗ್ರಾಮ ಆಡಳಿತ ಅಧಿಕಾರಿ (VAO) ಹುದ್ದೆಗಳಿಗೆ ಅರ್ಜಿ ಸಲ್ಲಿಸಬಹುದು. ಕರ್ನಾಟಕ ಕಂದಾಯ ಇಲಾಖೆಯಲ್ಲಿ ವೃತ್ತಿಜೀವನವನ್ನು ರೂಪಿಸಿಕೊಳ್ಳಲು ಬಯಸುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಅಧಿಕೃತ ವೆಬ್‌ಸೈಟ್: kandaya.karnataka.gov.in

## ಶ್ರೀ ಸಂಜೀವ್ ಪಾಲಿಟೆಕ್ನಿಕ್ ಕಾಲೇಜಿನ ವಿದ್ಯಾರ್ಥಿನಿ ಶಶಿಕಲಾ ಶೇ. 97.40 ಅಂಕಗಳಿಸಿ ಸಾಧನೆ

❑ ನೈಜ್ಯ ದೆಸೆ ನ್ಯೂಸ್

**ಲಿಂಗಸುಗೂರು: ನಗರದ ಶ್ರೀ ಸಂಜೀವ್ ಪಾಲಿಟೆಕ್ನಿಕ್ ಕಾಲೇಜಿನ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ (ಇಇಇ) ವಿಭಾಗದ ದ್ವಿತೀಯ ವರ್ಷದ ವಿದ್ಯಾರ್ಥಿನಿ ಕುಮಾರಿ ಶಶಿಕಲಾ ಅವರು, 2026ನೇ ಸಾಲಿನ ಡಿಪ್ಲೊಮಾ ಪರೀಕ್ಷೆಯಲ್ಲಿ ಶೇ. 97.40 ಅಂಕಗಳನ್ನು ಗಳಿಸುವ ಮೂಲಕ ಅದ್ಭುತ ಸಾಧನೆ ಮಾಡಿದ್ದಾರೆ.**

ಸಿಂಧನೂರು ತಾಲೂಕಿನ ಕೆ. ಬಸಾಪುರ ಗ್ರಾಮದ ನಿವಾಸಿ ಬಸವರಾಜ್ ವಿಶ್ವಕರ್ಮ ಅವರ ಪುತ್ರಿಯಾಗಿರುವ ಶಶಿಕಲಾ ಅವರು, ಗ್ರಾಮೀಣ ಭಾಗದ ವಿದ್ಯಾರ್ಥಿನಿಯಾಗಿದ್ದರೂ ಸಹ ಕಠಿಣ ಪರಿಶ್ರಮ ಮತ್ತು ಏಕಾಗ್ರತೆಯಿಂದ ಓದಿ, ಇಡೀ ಕಾಲೇಜಿಗೆ ಕೀರ್ತಿ ತಂದಿದ್ದಾರೆ. ಅವರ ಈ ಸಾಧನೆಯು ಸಹಪಾಠಿಗಳಿಗೆ ಮತ್ತು ಮುಂದಿನ ದಿನಗಳಲ್ಲಿ ತಾಂತ್ರಿಕ ಶಿಕ್ಷಣ ಪಡೆಯಲು ಬಯಸುವ ಗ್ರಾಮೀಣ ಭಾಗದ ಯುವತಿಯರಿಗೆ ಸ್ಫೂರ್ತಿಯಾಗಿದೆ. ವಿದ್ಯಾರ್ಥಿನಿಯ ಈ ವಿಶೇಷ ಸಾಧನೆಗೆ ಕಾಲೇಜಿನ ಆಡಳಿತ ಮಂಡಳಿ ಹಾಗೂ ಬೋಧಕ ಸಿಬ್ಬಂದಿ ಹರ್ಷ ವ್ಯಕ್ತಪಡಿಸಿದ್ದಾರೆ. ತಾಂತ್ರಿಕ ಶಿಕ್ಷಣ ಕ್ಷೇತ್ರದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಹೆಚ್ಚಾಗುತ್ತಿದ್ದು, ಶಶಿಕಲಾ ಅವರಂತಹ ವಿದ್ಯಾರ್ಥಿನಿಯರು ತಮ್ಮ ಶ್ರಮದಿಂದ ಉತ್ತಮ ಅಂಕಗಳನ್ನು ಗಳಿಸುವ ಮೂಲಕ ಇತರರಿಗೆ ದಾರಿ ದೀಪವಾಗುತ್ತಿದ್ದಾರೆ. ವಿದ್ಯಾರ್ಥಿನಿಯ ಈ ಸಾಧನೆಯು ತಾಂತ್ರಿಕ ವಲಯದಲ್ಲಿ ಅವರ ಭವಿಷ್ಯಕ್ಕೆ ಉತ್ತಮ ಬುನಾದಿ ಹಾಕಿಕೊಟ್ಟಿದೆ. ಶಶಿಕಲಾ ಅವರು ತಮ್ಮ ಮುಂದಿನ ದಿನಗಳಲ್ಲಿ ಉನ್ನತ ತಾಂತ್ರಿಕ ಶಿಕ್ಷಣ ಪಡೆದು ಸಮಾಜದ ಸೇವೆಗೆ ಮುಂದಾಗಲಿ ಎಂದು ಕಾಲೇಜಿನ ಸಿಬ್ಬಂದಿ ವರ್ಗ ಆಶಿಸಿದೆ.



"ನಮ್ಮ ಮಗಳು ಓದಿನಲ್ಲಿ ಇಷ್ಟು ದೊಡ್ಡ ಸಾಧನೆ ಮಾಡಿದ್ದಾಳೆ ಎನ್ನುವುದು ನಮಗೆ ಬಹಳ ಸಂತೋಷ ಮತ್ತು ಹೆಮ್ಮೆಯ ವಿಷಯ. ಇದು ಕೇವಲ ನಮ್ಮ ಕುಟುಂಬಕ್ಕೆ ಮಾತ್ರವಲ್ಲದೆ, ನಮ್ಮ ಕೆ. ಬಸಾಪುರ ಗ್ರಾಮಕ್ಕೂ ಹೆಮ್ಮೆ ತಂದಿದೆ. ಮಗಳ ಈ ಯಶಸ್ಸಿಗೆ ಶ್ರೀ ಸಂಜೀವ್ ಪಾಲಿಟೆಕ್ನಿಕ್ ಕಾಲೇಜಿನ ಪ್ರಾಂಶುಪಾಲರು ಮತ್ತು ಬೋಧಕ ವರ್ಗದವರು ನೀಡಿದ ಪ್ರೋತ್ಸಾಹವೇ ಕಾರಣ. ಅವರಿಗೆ ನಮ್ಮ ಧನ್ಯವಾದಗಳು."
ವಿದ್ಯಾರ್ಥಿಯ ತಂದೆ : ಬಸವರಾಜ್ ವಿಶ್ವಕರ್ಮ



"ಶಶಿಕಲಾ ನಮ್ಮ ಕಾಲೇಜಿನ ಅತ್ಯಂತ ಪ್ರತಿಭಾವಂತ ವಿದ್ಯಾರ್ಥಿನಿ. ಅವರು ತೋರಿಸಿರುವ ಶಿಸ್ತು, ಕಠಿಣ ಪರಿಶ್ರಮ ಮತ್ತು ವಿಷಯಗಳ ಮೇಲಿನ ಹಿಡಿತ ಇತರ ವಿದ್ಯಾರ್ಥಿಗಳಿಗೆ ಮಾದರಿಯಾಗಿದೆ. ಶೇ. 97.40 ಅಂಕಗಳಿಸಿರುವುದು ಸಾಮಾನ್ಯ ಸಾಧನೆಯಲ್ಲ. ಅವರ ಮುಂದಿನ ಶೈಕ್ಷಣಿಕ ಹಾಗೂ ವೃತ್ತಿಜೀವನವು ಉಜ್ವಲವಾಗಿರಲಿ ಎಂದು ಸಂಸ್ಥೆಯ ಪರವಾಗಿ ನಾನು ಹಾರೈಸುತ್ತೇನೆ."
ಕಾಲೇಜಿನ ಪ್ರಾಂಶುಪಾಲರು : ಜಾವಿದ್ ಹುಸೇನ್

## ಸುರಪುರ ಶಾಸಕರಿಗೆ ಮಂತ್ರಿ ಸ್ಥಾನ ಕೊಡಿ – ಅಂಬರೀಶ್ .ಎನ್

❑ ನೈಜ್ಯ ದೆಸೆ ನ್ಯೂಸ್

**ಯಾದಗಿರಿ: ಜಿಲ್ಲೆಯ ಸುರಪುರ ಮತಕ್ಷೇತ್ರದ ಶಾಸಕರಾಗಿರತಕ್ಕಂತ. ಶ್ರೀ ರಾಜ ವೇಣುಗೋಪಾಲ್ ನಾಯಕ್ ಅವರಿಗೆ ಮಂತ್ರಿ ಸ್ಥಾನವನ್ನು ಕೊಡಬೇಕೆಂದು. ಯಡಿಯಾಪುರ ಗ್ರಾಮದ ಕಾಂಗ್ರೆಸ್ ಮುಖಂಡರಾದ.**




ಅಂಬರೀಶ್ .ಎನ್. ಕುಂಬಾರ್ ಹಾಗೂ ರಾಜಶೇಖರ್ ನಾಯಕ್ ಜಾಗೀರ್ದಾರ್ ಆಲ್ದಾಳ ಇವರು ಮುಖ್ಯಮಂತ್ರಿಗಳಾಗಿರತಕ್ಕಂತ ಸನ್ಮಾನ್ಯ ಶ್ರೀ ಡಿಕೆ ಶಿವಕುಮಾರ್ ಇವರಿಗೆ ಒತ್ತಾಯಿಸಿದರು. ಒಂದು ವೇಳೆ ನಮ್ಮ ಶಾಸಕರಿಗೆ ಮಂತ್ರಿ ಸ್ಥಾನವನ್ನು ಕೊಡದಿದ್ದರೆ ಮುಂದಿನ ದಿನಮಾನಗಳಲ್ಲಿ ಹೋರಾಟ ಮಾಡಲಾಗುವುದೆಂದು ಎಚ್ಚರಿಸುತ್ತಾರೆ. ನಮ್ಮ ಶಾಸಕರು ಕ್ಷೇತ್ರದಲ್ಲಿ ಹಗಲಿರುಳು ಸೇವೆ ಸಲ್ಲಿಸಿದ್ದಾರೆ .ಅದೇ ರೀತಿಯಾಗಿ ರಾಜ್ಯಾದ್ಯಂತ ತಿರುಗಾಡಿ ಬಡವರು ಹಾಗೂ ದೀನ ದಲಿತರ ಸೇವೆ ಮಾಡಲು ಅವಕಾಶ ಮಾಡಿಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ನಮ್ಮ ಸುರಪುರ ತಾಲ್ಲೂಕು ಕಾಂಗ್ರೆಸ್ ಪಕ್ಷದ ಎಲ್ಲಾ ಮತದಾರರ ಪರವಾಗಿ ಕೇಳುತ್ತಿದ್ದೇವೆ.

## ಭಾರತ್ ಜೋಡೋ ಯುವಕರ ಸಂಘ ಕೈಬಿಟ್ಟು ಅಭಿವೃದ್ಧಿ ನಿಗಮಗಳಿಗೆ ಹೆಚ್ಚಿನ ಅನುದಾನ ನೀಡಿ : ಸಿ ಎ. ಚನ್ನಪ್ಪ

❑ ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ/ಕಂಪ್ಲಿ: ಭಾರತ್ ಜೋಡೋ ಯುವಕರ ಸಂಘದಂತಹ ಹೊಸ ಯೋಜನೆಗಳನ್ನು ಕೈಬಿಟ್ಟು, ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳು, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮಗಳಿಗೆ ಹೆಚ್ಚಿನ ಅನುದಾನ ಒದಗಿಸಿ ಅವುಗಳನ್ನು ಮತ್ತಷ್ಟು ಬಲಪಡಿಸಬೇಕು ಎಂದು ಬಿಜೆಪಿ ಎಸ್ಸಿ ಮೋರ್ಚಾ ತಾಲೂಕು ಅಧ್ಯಕ್ಷ ಸಿ.ಎ. ಚನ್ನಪ್ಪ ಆಗ್ರಹಿಸಿದರು.**



ಮಾತನಾಡಿ, ರಾಜ್ಯ ಸರ್ಕಾರ ಭಾರತ್ ಜೋಡೋ ಯುವಕರ ಸಂಘದ ಹೆಸರಿನಲ್ಲಿ ಸಾವಿರಾರು ಕೋಟಿ ರೂಪಾಯಿ ವೆಚ್ಚ ಮಾಡಲು ಮುಂದಾಗಿರುವುದು ಸಮಂಜಸವಲ್ಲ ಎಂದು ಟೀಕಿಸಿದರು. ಈ ಮೊತ್ತವನ್ನು ಸಮಾಜದ ಆರ್ಥಿಕ ಹಾಗೂ ಸಾಮಾಜಿಕವಾಗಿ ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಬಳಸಿದರೆ ಹೆಚ್ಚು ಜನ–ರಿಗೆ ನೇರ ಪ್ರಯೋಜನವಾಗುತ್ತದೆ ಎಂದು ಅಭಿಪ್ರಾಯಪಟ್ಟರು. ಹಿಂದುಳಿದವರ್ಗಗಳ ಅಭಿವೃದ್ಧಿನಿಗಮ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮಗಳ ಮೂಲಕ ಸ್ವಯಂ ಉದ್ಯೋಗ, ಶಿಕ್ಷಣ, ಸಾಲಸೌಲಭ್ಯ, ಕೌಶಲಾಭಿವೃದ್ಧಿ ಸೇ–ರಿದಂತೆ ಅನೇಕ ಯೋಜನೆಗಳು ಜಾರಿಯಲ್ಲಿವೆ. ಆದರೆ, ಈ ನಿಗಮಗಳಿಗೆ ಅಗತ್ಯ ಪ್ರಮಾಣದ ಅನುದಾನ ದೊರೆಯದ ಕಾರಣ ಅನೇಕ ಫಲಾನುಭವಿಗಳಿಗೆ ಯೋಜನೆಗಳ ಲಾಭಸಕಾಲದಲ್ಲಿ ಸಿಗುತ್ತಿಲ್ಲ ಎಂದು ಹೇಳಿದರು. ಸಾಮಾಜಿ–ಕ ನ್ಯಾಯದ ಬಗ್ಗೆ ಮಾತನಾಡುವ ಕಾಂಗ್ರೆಸ್ ಸರ್ಕಾರ, ಹಿಂದುಳಿದವರು. ಅಲ್ಪಸಂಖ್ಯಾತರು, ಎಸ್ಸಿ ಹಾಗೂ ಎಸ್ಸಿ ಸಮುದಾಯಗಳ ಅಭಿವೃದ್ಧಿಗೆ ಆದ್ಯತೆ ನೀಡಬೇಕು. ಅವರ ಕಲ್ಯಾಣಕ್ಕಾಗಿ ಮೀಸಲಿಟ್ಟ ಅನುದಾನವನ್ನು ರಾಜ–ಕೀಯ ಉದ್ದೇಶಗಳಿಗೆ ಬಳಸುವುದು ಸರಿಯಲ್ಲ ಹಾಗೂ ಇದು ಖಂಡನೀಯ ಎಂದು ಆರೋಪಿಸಿದರು. ಸರ್ಕಾರ ಭಾರತ್ ಜೋಡೋ ಯುವಕರ ಸಂಘ ಯೋಜನೆಯನ್ನು ಮರುಪರಿಶೀಲಿಸಿ, ಆ ಹಣವನ್ನು ಈಗಿರುವ ಅಭಿವೃದ್ಧಿ ನಿಗಮಗಳಿಗೆ ಹಂಚಿಕೆ ಮಾಡುವ ಮೂಲಕ ಸಮಾಜದ ದುರ್ಬಲ ವರ್ಗಗಳ ಆರ್ಥಿಕ ಸಬಲೀಕರಣಕ್ಕೆ ಆದ್ಯತೆ ನೀಡಬೇಕು ಎಂದು ಒತ್ತಾಯಿಸಿದರು.

## ಅಮೀನಗಡ– ಬಾಲಕಿಯರ ವಸತಿನಿಲಯದ ಮೇಲ್ವಿಚಾರಕಿ ವರ್ತನೆ ಖಂಡಿಸಿ ವಿದ್ಯಾರ್ಥಿನಿಯರ ದಿಢೀರ್ ಪ್ರತಿಭಟನೆ

❑ ನೈಜ್ಯ ದೆಸೆ ನ್ಯೂಸ್

**ಕವಿತಾಳ: ಪಟ್ಟಣ ಸಮೀಪದ ಮೀನಗಡ ಗ್ರಾಮದ ಬಾಲಕಿಯರ ವಸತಿ ನಿಲಯದ ಮೇಲ್ವಿಚಾರಕಿ ಗಂಗಮ್ಮ ಅವರ ವಿರುದ್ಧ ಹಿಂಸೆ, ಮಾನಸಿಕ ಕಿರುಕುಳ ಹಾಗೂ ಬೆದರಿಕೆಯ ಗಂಭೀರ ಆರೋಪಗಳನ್ನು ಮಾಡಿ ನೂರಾರು ವಿದ್ಯಾರ್ಥಿನಿಯರು ದಿಢೀರ್ ಪ್ರತಿಭಟನೆ ನಡೆಸಿದ ಘಟನೆ ಇಂದು ನಡೆದಿದೆ.**



'ವಸತಿ ನಿಲಯದ ಆವರಣದಲ್ಲಿ ಧರಣಿ ನಡೆಸಿದ ವಿದ್ಯಾರ್ಥಿನಿಯರು ಮೇಲ್ವಿಚಾರಕಿ ಗಂಗಮ್ಮ ನಮಗೆ ಬೇಡ ಅವರ ವರ್ತನೆಯಿಂದ ನಮ್ಮದಿಯಿಂದ ಓದಲು ಸಾದ್ಯವಾಗುತ್ತಿಲ್ಲ ,ರಾತ್ರಿ ವೇಳೆ ಅನಗತ್ಯ ಬಾಗಿಲು ತಟ್ಟಿ ಬೆದರಿಸುವುದು, ಸಣ್ಣ ಪುಟ್ಟ ವಿಷಯಗಳಿಗೂ ಕಿರುಕುಳ ನೀಡುವುದು ನಿತ್ಯದ ಸಂಗತಿಯಾಗಿದೆ 'ಎಂದು ಆರೋಪಿಸಿದರು. ಈ ತರಹ ವಿದ್ಯಾಥಿನಿಯರಿಗೆ ಕಿರುಕುಳ ನೀಡುತ್ತಿರುವುದು ಇದೇ ಮೊದಲಲ್ಲ ಕಳೆದ ವರ್ಷ ಜನೆವರಿ 26ರ ಸಂದರ್ಬದಲ್ಲಿ ಕೆಲ ವಿದ್ಯಾರ್ಥಿನಿಯರನ್ನು ಕೊಠಡಿಯೊಳಗೆ ಕೂಡಿ ಹಾಕಿ ದೈಹಿಕವಾಗಿ ಹಲ್ಲೆ ಮಾಡಿರುವ ಮೇಲ್ವಿಚಾರಕಿ ಗಂಗಮ್ಮ ಅವರು ಅಲ್ಲದೆ 9ನೇ ತರಗತಿಯ ಹೊಸ ವಿದ್ಯಾರ್ಥಿನಿಯ–ರಿಗೆ ರಾತ್ರಿ ದೇವ್ವ ಬರುತ್ತದೆ ಎಂದು ಭಯ ಹುಟ್ಟಿಸಲಾಗುತ್ತಿದ್ದು , ಇದರಿಂದ ಮಕ್ಕಳು ಆತಂಕಕ್ಕೆ ಒಳಗಾಗಿ ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ ಎಂದು ದೂರಿದರು.

ಸಣ್ಣಪುಟ್ಟ ತಪ್ಪುಗಳಿಗೂ ವಿದ್ಯಾರ್ಥಿನಿಯರಿಗೆ ಹೆದರಿಸಿ ಬಲವಂತವಾಗಿ ಕ್ಷಮಾಪತ್ರ ಬರೆಯಿಸಿಕೊಳ್ಳಲಾಗುತ್ತಿದೆ, ಹಿಗಾಗಿ ವಸತಿ ನಿಲಯದಲ್ಲಿ ಭಯದ ವಾತಾವರಣನಿರ್ಮಾಣವಾಗಿದ್ದು ವಿದ್ಯಾಭ್ಯಾಸಕ್ಕೆ ಅಡ್ಡಿಯಾಗುತ್ತಿದೆ ಎಂದು ಪ್ರತಿಭಟನಾ ನಿರತ ವಿದ್ಯಾರ್ಥಿನಿಯರು ಆಕ್ರೋಶ ವ್ಯಕ್ತಪಡಿಸಿದರು. ಇದೇ ವೇಳೆ ವಸತಿ ನಿಲಯದಲ್ಲಿ ಇಗ–ಾಗಲೇ ಗಂಗಮ್ಮ ಅವರು ವಾರ್ಡನ್ ಆಗಿ ಕಾರ್ಯನಿರ್ವಹಿಸುತ್ತಿದ್ದರೂ , ದೀಕ್ಷಾ ಕನ್ಸ್ಲೀನ್ಸಿ ಏಜನ್ಸಿ ಮೂಲಕ ನಿಂಗಮ್ಮ ಎನ್ನುವವರನ್ನು ಮತ್ತೊಬ್ಬ ವಾರ್ಡನ್ ಆಗಿ ನೇಮಕ ಮಾಡಿರುವುದು ಗೊಂದಲಕ್ಕೆ ಕಾರಣವಾಗಿದೆ ಎಂಬ ಮಾಹಿತಿ ಲಬ್ಯವಾಗಿದೆ. ಇಬ್ಬರು ವಾರ್ಡನ್‌ಗಳ ನಡುವಿದನ ಅಧಿಕಾರದ ಸಂಘರ್ಷದಿಂದ ವಿದ್ಯಾರ್ಥಿನಿಯರು ಸಂಕಷ್ಟ ಅನುಭವಿಸುತ್ತಿದ್ದಾರೆ ಎನ್ನಲಾಗಿದೆ.

ಸ್ಥಳಿಯ ಪ್ರೌಢಶಾಲೆಯ ಮುಖ್ಯಗುರುಗಳಾದ ರಾಯನಗೌಡ ಬಿರಾದಾರ್ ಹಾಗೂ ಬಸನಗೌಡ ಅವರು ಸ್ಥಳಕ್ಕೆ ಭೇಟಿ ನೀಡಿ ವಿದ್ಯಾರ್ಥಿನಿಯರೊಂದಿಗೆ ಚರ್ಚಿಸಿ ವಸತಿ ನಿಲಯದಲ್ಲಿನ ಸಿಸಿ ಟಿವಿ ದೃಷ್ಯಾವಳಿಗಳನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು ಜೊತೆಗೆ ಸೋಮವಾರದವರೆಗೆ ವಸತಿ ನಿಲಯದ ಉಸ್ತುವಾರಿಯನ್ನು ಸಿಆರ್‌ಪಿ ಅವರಿಗೆ ವಹಿಸಿದ ನಂತರ ವಿದ್ಯಾರ್ಥಿನಿಯರು ಪ್ರತಿಭಟನೆ ಕೈಬಿಟ್ಟರು.

ಆದರೇ ಮೇಲ್ವಿಚಾರಕಿ ಗಂಗಮ್ಮ ಅವರು ತಮ್ಮ ವಿರುದ್ಧದ ಎಲ್ಲಾ ಆರೋಪಗಳನ್ನು ತಳ್ಳಿಹಾಕಿದ್ದು, ನಾನು ವಸತಿ ನಿಲಯದ ಮಕ್ಕಳನ್ನು ನನ್ನ ಮಕ್ಕಳನ್ನು ಸ್ವಂತ ಮಕ್ಕಳಂತೆ ನೋಡಿಕೊಳ್ಳುತ್ತಿದ್ದೆನೆ, ನನ್ನ ವಿರುದ್ಧದ ಆರೋಪಗಳು ಸತ್ಯಕ್ಕೆ ದೂರವಾಗಿದೆ ಕೆಲ ಕಿಡಿಗೇಡಿಗಳ ಪ್ರಚೋದನೆಯಿಂದ ಮಕ್ಕಳು ಪ್ರತಿಭಟನೆ ನೆಡೆಸಿದ್ದಾರೆ ಎಂದು ಸ್ಪಷ್ಟನೆ ನೀಡಿದರು.

## ಮಹಿಳೆಯರಿಗೆ ಶೇ.33 ಪ್ರತಿಶತ ಮೀಸಲಾತಿ ಜಾರಿಗಾಗಿ ಜೆಎಂಎಸ್ ನಿಂದ ಪೋಸ್ಟರ್ ಬಿಡುಗಡೆ



❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಮಹಿಳೆಯರ ಸಮತೆ ಮತ್ತು ಘನತೆಯ ಬದುಕಿನ ಹಕ್ಕುಗಳಿಗಾಗಿ ದೇಶದ ಸಂಸತ್ತಿನಲ್ಲಿ ಶೇ.33 ರಷ್ಟು ಮೀಸಲಾತಿಯನ್ನು ಯಾವುದೇ ಷರತ್ತುಗಳು ಇಲ್ಲದೆ ತಕ್ಷಣ ಜಾ–ರಿಗಾಗಿ ಜು.20 ಸೋಮವಾರ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯಿಂದ ಪೋಸ್ಟರ್ ಬಿಡುಗಡೆ ಮಾಡುವ ಮೂಲಕ ಒತ್ತಾಯಿಸಿದೆ.**

ದೇಶದ ಸಂಸತ್ತಿನಲ್ಲಿ ಮಹಿಳೆಯರ ಪ್ರಾತಿನಿಧ್ಯದಲ್ಲಿ 185 ರಾಷ್ಟ್ರಗಳ ಪೈಕಿ ಭಾರತವು 151ನೇ ಸಾಲಿನಲ್ಲಿದೆ. ಭಾರತದ ಮಹಿಳೆಯರು ತಮ್ಮ ನ್ಯಾಯಸಮ್ಮತವಾದ ರಾಜಕೀಯ ಅವಕಾಶ ಮತ್ತು ಅಧಿಕಾರದಿಂದ ವಂಚಿತರಾಗಿದ್ದಾರೆ. 2023ರಲ್ಲಿ ಮಹಿಳಾ ಮೀಸಲಾತಿ ಕಾಯ್ದೆ 106 ತಿದ್ದುಪಡಿ ಅಂಗೀಕಾರ ಆದಾಗ ಅದರ ಜಾತಿಯನ್ನು ಜನಗಣತಿ ಮತ್ತು ಕ್ಷೇತ್ರ ಮರುವಿಂಗಡನೆ ಪೂರ್ಣಗೊಳ್ಳುವವರೆಗೆ ಮುಂದೂಡಲಾಯಿತು.

ಇದನ್ನು ಅನೇಕ ಸಂಸದ ಸದಸ್ಯರು ಪ್ರಶ್ನಿಸಿ ನಾರಿಶಕ್ತಿ ಕೇಂದ್ರ ಸರ್ಕಾರದ ಘೋಷಣೆ ಮಾತಿನಲ್ಲೆ ಉಳಿದಿದೆ. ಈ ಅಧಿವೇಶನದಲ್ಲಿಯೇ ಜನಗಣತಿ ಜೊತೆಗೆ ಕ್ಷೇತ್ರ ಮರುವಿಂಗಡಣೆ ಪ್ರಕ್ರಿಯೆಯಿಂದ ಮಹಿಳಾ ಮೀಸಲಾತಿಯನ್ನು ಬೇರ್ಪಡಿಸುವ ಸಂವಿಧಾನ ತಿದ್ದುಪಡಿ ಮಸೂದೆಯನ್ನು ಕೇಂದ್ರ ಮಂಡಿಸಬೇಕು. ತಕ್ಷಣ ಜಾರಿಗೊಳಿಸಬೇಕೆಂದು ಒತ್ತಾಯಿಸಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯಿಂದ ಜು.20 ಸೋಮವಾರದಂದು ನಗರದ ವಿವಿಧ ಪ್ರದೇಶಗಳಲ್ಲಿ ಪೋಸ್ಟರ್ ಬಿಡುಗಡೆ ಮಾಡುವ ಮೂಲಕ ಒತ್ತಾಯಿಸಿದರು.

ಈ ಕಾರ್ಯಕ್ರಮದಲ್ಲಿ: ಶಕುಂತಲಾಪಾಟೀಲ್, ಸಿದ್ದೇಶ್ವರಿ, ಸರಸ್ವತಿ ಪಾಟೀಲ್, ದೇವೀರಮ್ಮ, ವಿಜಯಲಕ್ಷ್ಮೀ ಮಸ್ಕಿ, ಜಲಜಾಕ್ಷೀ ಹಿರೇಮಠ, ಸುನಿತಾ, ನಾಗರತ್ನ, ಹುಲಿಗಮ್ಮ, ನಂದಮ್ಮ, ಲಕ್ಷ್ಮೀದೇವಿ, ಶಹನಾ, ರೇಷ್ಮಾಬೇಗಂ, ಸೇರಿದಂತೆ ಇತರರು ಇದ್ದರು.

## ಕಂಪ್ಲಿ ತಾಲೂಕಿನ ಹಂಪಾದೇವನಹಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಗ್ಯಾರಂಟಿ ಯೋಜನೆಗಳ ಜಾಗೃತಿ ಕಾರ್ಯಕ್ರಮ

❑ ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ: ಕರ್ನಾಟಕ ಸರ್ಕಾರದ ಪಂಚ ಗ್ಯಾರಂಟಿಗಳ ಯೋಜನೆಗೆ ಮೂರು ವರ್ಷ ತುಂಬಿರುವ ಪ್ರಯುಕ್ತ ತಾಲೂಕು ಗ್ಯಾರಂಟಿ ಅಧ್ಯಕ್ಷರಾದ ಕೆ.ಶ್ರೀನಿವಾಸರಾವ್ ಅಧ್ಯಕ್ಷತೆಯಲ್ಲಿ ಹಾಗೂ ತಾ.ಪಂ. ಕಾರ್ಯನಿರ್ವಾಹಕ ಅಧಿಕಾ–ರಿಗಳಾದ ಆರ್.ಕೆ.ಶ್ರೀಕುಮಾರ್ ಉಪಸ್ಥಿತಿಯಲ್ಲಿ ಗ್ಯಾರಂಟಿ ಯೋಜನೆಗಳ ಜಾಗೃತಿ ಕಾರ್ಯಕ್ರಮವು ಹಂಪಾದೇವನಹಳ್ಳಿ ಗ್ರಾಮದಲ್ಲಿ ಜರುಗಿತು.**



ಗ್ಯಾರಂಟಿ ಯೋಜನೆಗಳ ಫಲಾನುಭವಿಗಳೊಂದಿಗೆ ಸಂವಾದ ನಡೆಸಿದ ಅಧ್ಯಕ್ಷರು ಮತ್ತು ಅಧಿಕಾರಿಗಳು 5 ಗ್ಯಾರಂಟಿ ಯೋಜನೆಗಳ ಸತತವಾಗಿ ನೋಂದಾಯಿಸಿಕೊಂಡ ಎಲ್ಲಾ ಫಲಾನುಭವಿಗಳಿಗೆ ಕೂಡ ಕಡ್ಡಾಯವಾಗಿ ತಲುಪುತ್ತದೆ ಎಂದು ತಿಳಿಸಿದರು. ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ತಾಲ್ಲೂಕು ಅಧ್ಯಕ್ಷ ಕೆ.ಶ್ರೀನಿವಾಸರಾವ್ ಮಾತನಾಡಿ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರ ಚುಕ್ಕಾಣಿ ಹಿಡಿದ ಮೇಲೆ ಚುನಾವಣೆ ಸಂದರ್ಭದಲ್ಲಿ ಮತದಾರರಿಗೆ ಮಾತುಕೊಟ್ಟಂತೆ ಎಲ್ಲಾ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿ ನುಡಿದಂತೆ ನಡೆದಿದ್ದೇವೆ ಯಾವುದೇ ಕಾರಣ–ಕ್ಕೂ ಈ ಐದು ಗ್ಯಾರಂಟಿಗಳನ್ನು ನಿಲ್ಲಿಸುವ ಅಥವಾ ಬಂದ್ ಮಾಡುವ ಅನಿವಾರ್ಯತೆ ಇಲ್ಲ ಸಮಾಜದ ಕಟ್ಟ ಕಡೆಯ ಫಲಾನುಭವಿ ಕೂಡ ಸಬಲರಾಗುವವರೆಗೂ ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸುವುದಿಲ್ಲ ಎಂದು ಸಾರ್ವಜನಿಕರಿಗೆ ಹೇಳಿದರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು , ಗ್ಯಾರೆಂಟಿ ಸಮಿತಿಯ ಸದಸ್ಯರಾದ, ಶಿವಕುಮಾರ್, ವೀರಭದ್ರಗೌಡ ಹಾಗೂ ಗ್ಯಾರಂಟಿ ಯೋಜನೆಯ ಫಲಾನುಭವಿಗಳು ಗ್ರಾಮದ ಹಿರಿಯರು ಸ್ವಸಹಾಯ ಸಂಘದ ಮಹಿಳೆಯರು ಹಾಗೂ ಸಾರ್ವಜನಿಕರು ಹಾಜರಿದ್ದರು. ತಾಲ್ಲೂಕಿನ 10 ಗ್ರಾಮ ಪಂಚಾಯತಿಗಳಲ್ಲಿಯೂ ಸರ್ಕಾರದ ಗ್ಯಾರಂಟಿ ಯೋಜನೆಗಳ ಜಾಗೃತಿ ಕಾರ್ಯಕ್ರಮಗಳು ಅನುಷ್ಠಾನ ಸಮಿತಿಯ ಸದಸ್ಯರು, ತಾ.ಪಂ. ಹಾಗೂ ಗ್ರಾ.ಪಂ. ಅಧಿಕಾರಿಗಳ ನೇತೃತ್ವದಲ್ಲಿ ಯಶಸ್ವಿಯಾಗಿ ಜರುಗಿದವು.ಕಾರ್ಯಕ್ರಮದಲ್ಲಿ ಪಿಡಿಒಗಳು, ಕಾರ್ಯದರ್ಶಿಗಳು, ಸಿಬ್ಬಂದಿಗಳು, ಗ್ಯಾರಂಟಿ ಯೋಜನೆಯ ಫಲಾನುಭವಿಗಳು ಭಾಗವಹಿಸಿದ್ದರು.

# ಆದಾಯ ಮಿತಿ ರದ್ದುಪಡಿಸುವಂತೆ ಅಂಗವಿಕಲರ ಒತ್ತಾಯ

❑ ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ಅಂಗವಿಕಲರ ಮಾಸಾಶನ ನಿಲುಗಡೆ, ಹಾಸ್ಯಾಸ್ಪದ ಆದಾಯ ಮಿತಿಯನ್ನು ರದ್ದುಪಡಿಸುವಂತೆ , ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟದಿಂದ ಮುಖ್ಯ ಮಂತ್ರಿ ಡಿ ಕೆ ಶಿವಕುಮಾರ್ ರವರಿಗೆ ಸಹಾಯಕ ಆಯುಕ್ತರ ಮೂಲಕ ಮನವಿಯನ್ನು ಸಲ್ಲಿಸಲಾಯಿತು .**




ವಾರ್ಷಿಕ ಆದಾಯ ಮಿತಿ 32 ಸಾವಿರ ಕ್ಕಿಂತ ಹೆಚ್ಚಿರುವವರ ಮಾಸಾಶನವನ್ನು ಪರಿಶೀಲಿಸಬೇಕೆಂದು ಸರ್ಕಾರ ಆದೇಶ ಮಾಡಿದೆ. ಇದರಿಂದ ರಾಜ್ಯದ ಅಂಗವಿಕಲರು ಸಂಕಷ್ಟಗಳನ್ನು ಅನುಭವಿಸುತ್ತಿದ್ದಾರೆ. ಅಂಗವಿಕಲರ ಪೆನ್ಷನ್ ನಿಲುಗಡೆಯಿಂದಾಗಿ ಅಂಗವಿಕಲರು ಔಷಧಿ, ಚಿಕಿತ್ಸೆ, ಪ್ರಯಾಣ ವೆಚ್ಚ ಹಾಗೂ ಇತರ ಅಗತ್ಯ ಖರ್ಚುಗಳಿಗೂ ಪರದಾಡುವಂತಾಗಿದೆ. ತಮ್ಮ ಕನಿಷ್ಠ ವೈಯಕ್ತಿಕ ಅಗತ್ಯಗಳಿಗೂ ಕುಟುಂಬದ ಸದಸ್ಯರು ಅಥವಾ ಇತರರನ್ನು ಅವಲಂಬಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಕುಟುಂಬದ ವಾರ್ಷಿಕ ವರಮಾನ ಮಿತಿ 32 ಸಾವಿರ ಎನ್ನುವುದು, ತಿಂಗಳಿಗೆ 2,700 ಕ್ಕಿಂತ ಕಡಿಮೆಯಾಗಿದೆ.

ಇಷ್ಟು ಕಡಿಮೆ ಹಣದಲ್ಲಿ ಒಬ್ಬ ವ್ಯಕ್ತಿ ಜೀವನ ನಡೆಸುವುದು ಅಸಾಧ್ಯ ಎನ್ನುವಾಗ ಇದನ್ನು ಕುಟುಂಬ ಆದಾಯ ಮಿತಿ ಎನ್ನುವುದು ಹಾಸ್ಯಾಸ್ಪದವಾಗಿದೆ. ಈಗಾಗಲೇ ರಾಜ್ಯದ ಬಡತನ ರೇಖೆಗಿಂತ ಕೆಳಗಿರುವವರ ಕುಟುಂಬವನ್ನು ಗುರುತಿಸಲು ಬಿಪಿಎಲ್ ರೇಷನ್ ಕಾರ್ಡಿಗೆ, 120,000 ರೂಗಳ ಆದಾಯ ಮಿತಿಯನ್ನು ಗುರುತಿಸಲಾಗಿದೆ. ಅಂಗವಿಕಲರು ಶೈಕ್ಷಣಿಕ, ಆರ್ಥಿಕ, ಸಾಮಾಜಿ–ಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಅತ್ಯಂತ ಹಿಂದುಳಿದ ಮತ್ತು ಸಂಕಷ್ಟಕ್ಕೆ ಒಳಗಾಗಿರುವ ಸಮುದಾಯದವರಾಗಿದ್ದಾರೆ. ಸರ್ಕಾರ ಮತ್ತು ಸಮಾಜದ ನೆರವಿಲ್ಲದೆ ಅಂಗವಿಕಲರು ಬದುಕನ್ನು ಕಟ್ಟಿಕೊಳ್ಳಲು ಸಾಧ್ಯವಿಲ್ಲ. ಅಂಗವೈಕಲ್ಯದ ಕಾರಣದಿಂದಾಗಿ ಶಿಕ್ಷಣ, ಉದ್ಯೋಗ ಹಾಗೂ ಸ್ವಾವಲಂಬನೆಯ ಅವಕಾಶಗಳಿಂದ ವಂಚಿತರಾಗಿರುವ ಇವರು ಅತ್ಯಂತ ಹಿಂದುಳಿದಿರುವುದನ್ನು ಸರ್ಕಾರದ ವಿವಿಧ ಅಂಕಿ–ಅಂಶಗಳು ಸ್ಪಷ್ಟವಾಗಿ ತೋರಿಸುತ್ತವೆ.

ಇದರ ಹಿನ್ನೆಲೆಯಲ್ಲಿ ಅಂಗವಿಕಲರಿಗೆ ನೀಡುವ ಮಾಸಾಶನವು ಕೇವಲ ಒಂದು ಕಲ್ಯಾಣದ ಯೋಜನೆಯಲ್ಲ, ಅದು ಅವರ ಗೌರವಯುತ ಬದುಕಿನ ಹಕ್ಕಿನ ಒಂದು ಭಾಗವಾಗಿದೆ. ಭಾರತ ಸರ್ಕಾರ ಅಂಗೀಕರಿಸಿರುವ ವಿಶ್ವಸಂಸ್ಥೆಗಳ ಅಂಗವಿಕಲರ ಹಕ್ಕುಗಳ ಒಪ್ಪಂದ (ಗಓಅಖಕಆ) ಹಾಗೂ ವಿಕಲಚೇತನರ ಹಕ್ಕುಗಳ ಕಾಯ್ದೆ, 2016 ಕೂಡ ಅಂಗವಿಕಲರಿಗೆ ಸಾಮಾಜಿಕ ಭದ್ರತೆ ಮತ್ತು ಗೌರವಯುತ ಜೀವನವನ್ನು ಖಾತರಿಪಡಿಸುವಂತೆ ಸರ್ಕಾರಗಳಿಗೆ ಹೊಣೆಗಾರಿಕೆಯನ್ನು ವಿಧಿಸಿವೆ.ನೆರೆ ರಾಜ್ಯಗಳಲ್ಲಿಯೂ ಅಂಗವಿಕಲರ ಸಾಮಾಜಿ–ಕ ಭದ್ರತಾ ಯೋಜನೆಗಳಿಗೆ ಹೆಚ್ಚು ವಾಸ್ತವಿಕ ಆದಾಯ ಮಾನದಂಡಗಳನ್ನು ಅನುಸ–ರಿಸಲಾಗುತ್ತಿದೆ. ತಮಿಳುನಾಡಿನಲ್ಲಿ ವಾರ್ಷಿಕ ಆದ–ಾಯ ಮಿತಿ ?3,00,000, ಆಂಧ್ರಪ್ರದೇಶದಲ್ಲಿ ಗ್ರಾಮೀಣ ಪ್ರದೇಶಗಳಿಗೆ ?1,20,000 ಹಾಗೂ ನಗರ ಪ್ರದೇಶಗಳಿಗೆ ?1,44,000, ತೆಲಂಗಾಣದಲ್ಲಿ ಗ್ರಾಮೀಣ ಪ್ರದೇಶಗಳಿಗೆ ?1,50,000 ಹಾಗೂ ನಗರ ಪ್ರದೇಶಗಳಿಗೆ ?2,00,000 ಆದಾಯ ಮಿತಿಯನ್ನು ನಿಗದಿಪಡಿಸಲಾಗಿದೆ. ಕೇರಳದಲ್ಲಿ ವರ್ಗೀಕರಣವು ಮುಖ್ಯವಾಗಿ ಸಾಮಾಜಿ–ಕ ಆರ್ಥಿಕ ಮಾನದಂಡಗಳ ಮೇಲೆ ನಡೆಯುತ್ತದೆ.

ಈ ಹಿನ್ನಲೆಯಲ್ಲಿ ಮೇಲಿನ ಅಂಶಗಳನ್ನು ಗಮನಿಸಬೇಕಿದೆ. ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟ, ಕರ್ನಾಟಕ ರಾಜ್ಯ ಸಮಿತಿಯು ಈ ರೀತಿಯ ಅವೈಜ್ಞಾನಿಕ ವಾರ್ಷಿಕ ಮಾನದಂಡಗಳನ್ನು ಕೂಡಲೇ ರದ್ದು ಮಾಡಿ ಕನಿಷ್ಠ ಬಿಪಿಎಲ್ ರೇಷನ್ ಕಾರ್ಡ್‌ಗೆ ಅನ್ವಯಿಸುವ 1,20,000 ರೂಗಳ ವಾರ್ಷಿಕ ಆದಾಯ ಮಿತಿಯನ್ನು ಅಂಗವಿಕಲರ ಮಾಸಾಶನಕ್ಕೂ ಅನ್ವಯಿಸಬೇಕೆಂದು ಒತ್ತಾಯಿಸಿದರು . ಈ ಸಂದರ್ಭದಲ್ಲಿ ಅಧ್ಯಕ್ಷರು ರಾಮಣ್ಣ ಸರ್ಜಾಪುರ ,ಕಾರ್ಯದರ್ಶಿ ಪರಶುರಾಮ್ ಗೊರೆಭಾಳ್ , ಸುರೇಂದ್ರ , ಶ್ರೀದೇವಿ , ಶ್ರೀಲತಾ , ವನಜಾಕ್ಷಿ ,ಮಾಬುಬೀ , ಸಮೀರ್ , ಮುಕ್ತರ್ ಪಾಶ , ಖೈಯುಮ್ ಪಾಶ , ಅಜಗರ್ . ರವಿಕುಮಾರ್ , ಸಂಗಮೇಶ , ನೂರಜಹಾನ್ ಬೇಗಂ , ಸೌಭಾಗ್ಯ , ಶರಣು ಬಸವ , ಈರಣ್ಣ ಸೇರಿದಂತೆ ಇತರರು ಇದ್ದರು

